₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 18.12.2024 ಸಂಪುಟ: 9 ಸಂಚಿಕೆ: 359 ಪುಟಗಳು: 10 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ತಪ್ಪಿದ ಫಾಲೋ ಆನ್

ಆಕಾಶದೀಪ (27 ರನ್) ಜಸ್ಪ್ರೀತ್ ಬುಮ್ರಾ (10) ಕೊನೆ ವಿಕೆಟ್ ಜತೆಯಾಟದ ಮೂಲಕ ಭಾರತ ಆಸೀಸ್ ಎದುರು ಫಾಲೋ ಆನ್‌ನಿಂದ ಪಾರಾಗಿದೆ.

ಪುಟ ತೆರೆದಂತೆ...

ಹುಳುಗರುಳು ಛಿದ್ರವಾಗುವುದನ್ನು ತಪ್ಪಿಸಿ!
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ರಕ್ಷಣೆಯ ಕಾನೂನೇ ಶೋಷಣೆಯ ಅಸ್ತ್ರ
ಲೋಕಮತ
ಲೋಕೇಶ್ ಕಾಯರ್ಗ
ಸಂ.ಗಮ | 7

ಮಾತಂದ್ರೆ ಮಾತು

1975ರಲ್ಲಿ ಇಂದಿರಾ ಗಾಂಧಿ ಹೇರಿದ ತುರ್ತು ಪರಿಸ್ಥಿತಿ ಒಂದು ಪ್ರಮಾದ. ಆದರೆ, ಅದು ಕೇವಲ 18 ತಿಂಗಳು ಮಾತ್ರ ಇತ್ತು. ಆ ತುರ್ತು ಪರಿಸ್ಥಿತಿ ಅಸ್ಪಷ್ಟವಾಗಿತ್ತು. ಸಂವಿಧಾನದ ಬೆಂಬಲ ಕೂಡ ಇತ್ತು. ಆದರೆ, ಅದು ಅಂತ್ಯವಾಯಿತು. ಆದರೆ, ಈಗ ಇರುವ ಅಘೋಷಿತ ತುರ್ತುಪರಿಸ್ಥಿತಿ ಯಾವಾಗ ಮುಗಿಯುತ್ತದೆ. ಇದನ್ನು ಅಂತ್ಯಗೊಳಿಸಲು ಸಂವಿಧಾನದಲ್ಲಿ ಏನಾದ್ರೂ ಇದೆಯಾ?

ಅಭಿಷೇಕ್ ಮನು ಸಿಂಘ್ವಿ
ಕಾಂಗ್ರೆಸ್ ಹಿರಿಯ ಸಂಸದ

ದಾರಿದೀಪೋಕ್ತಿ

ಸಾಧನೆಯ ಪಥದಲ್ಲಿ ನಡೆಯುವಾಗ ಪ್ರಮಾದ, ಅವಮಾನ, ಸೋಲು, ಹತಾಶೆ, ವಿಷಾದ, ತಿರಸ್ಕಾರಗಳೆಲ್ಲ ಸಹಜ. ಅವರೆಂಥ ಸಾಧಕರೇ ಇರಲಿ, ಇವುಗಳನ್ನು ಎದುರಿಸದೇ ಯಾರೂ ಯಶಸ್ಸಿನ ಶಿಖರ ತಲುಪಿಲ್ಲ. ನಿಮಗೂ ಇಂಥ ಅನುಭವವಾದಾಗ ಕೈಚೆಲ್ಲಬೇಕಿಲ್ಲ.

ವಕ್ರತುಂಡೋಕ್ತಿ

ಯಾರಾದರೂ ಸೋಫಾದ ಮೇಲೆ ಕುಳಿತು ಸುಮ್ಮನೆ ಯೋಚಿಸುತ್ತಿದ್ದರೆ ಸೋಮಾರಿ ಎಂದು ಭಾವಿಸಬೇಕಿಲ್ಲ. ಈ ಜಗತ್ತನ್ನು ಬದಲಿಸುವ ಯೋಚನೆಗೆ ಕಾವು ಕೊಡುತ್ತಿರಬಹುದು.

ಒಂದು ದೇಶ ಒಂದು ಚುನಾವಣೆ ವಿಧೇಯಕಕ್ಕೆ ವಿಪಕ್ಷಗಳ ವಿರೋಧ, ವಿಸ್ತೃತ ಪರಾಮರ್ಶೆಗಾಗಿ ಜಂಟಿ ಸದನ ಸಮಿತಿಗೆ ಕಳುಹಿಸಲು ನಿರ್ಧಾರ

ಒಎನ್‌ಒಪಿ ಪರ 269 ವಿರೋಧಿಸಿ 198 ಮತ

ದೆಹಲಿ: ಬಹು ಚರ್ಚಿತ 'ಒಂದು ದೇಶ, ಒಂದು ಚುನಾವಣೆ' ವಿಧೇಯಕವನ್ನು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘ ವಾಲ್ ಅವರು ಲೋಕಸಭೆಯಲ್ಲಿ ಮಂಗಳವಾರ ಮಂಡಿಸಿದರು.

ತೀವ್ರ ಚರ್ಚೆಯ ಬಳಿಕ ವಿಧೇಯಕಕ್ಕೆ ಒಪ್ಪಿಗೆ ಪಡೆಯಲು ಮಂತಯಂತ್ರದ ಮೂಲಕ ನಡೆದ ಮತ ಚಲಾವಣೆ ಪ್ರಕ್ರಿಯೆಯಲ್ಲಿ 269 ಸದಸ್ಯರು ವಿಧೇಯಕದ ಪರವಾಗಿ ಹಾಗೂ 198 ಸದಸ್ಯರು ವಿರೋಧವಾಗಿ ಮತ ಹಾಕಿದ್ದಾರೆ.

ಈ ವಿಧೇಯಕಕ್ಕೆ ಕಾಂಗ್ರೆಸ್ ಸೇರಿ ಅನೇಕ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಈ ಬೆನ್ನಲ್ಲೇ ಈ ವಿಧೇಯಕವನ್ನು ವಿಸ್ತೃತ ಪರಾಮರ್ಶೆಗಾಗಿ ಜಂಟಿ ಸದನ ಸಮಿತಿಗೆ ಕಳುಹಿಸುವ ನಿರ್ಧಾರಕ್ಕೆ ಲೋಕಸಭೆ ಬಂದಿದೆ. ಅಲ್ಲಿ ವಿಸ್ತೃತ ಚರ್ಚೆಯಾಗಿ, ಅಗತ್ಯ ಮಾರ್ಪಾಡುಗಳ ಬಳಿಕ ಮತ್ತೊಂದು ಬಾರಿ ಮಸೂದೆ ಎರಡೂ ಸದನಗಳಲ್ಲಿ ಮಂಡನೆಯಾಗಲಿದ್ದು, ಆಗ ಒಂದು ರಾಷ್ಟ್ರ, ಒಂದು ಚುನಾವಣೆ ಮಸೂದೆಯ ಭವಿಷ್ಯ ನಿರ್ಧಾರವಾಗಲಿದೆ.

ವಿಧಾನಸಭೆ ಚುನಾವಣೆ ಪ್ರತ್ಯೇಕವಾಗಿಯೂ ನಡೆಸಲು ಅವಕಾಶ: ಲೋಕಸಭಾ ಚುನಾವಣೆ ಜತೆಗೆ ವಿಧಾನಸಭಾ ಚುನಾವಣೆ ನಡೆಸಲು ಆಗದ ಸಂದರ್ಭ ಎದುರಾದರೆ ಅದಕ್ಕೆ ಅವಕಾಶ ಕಲ್ಪಿಸುವ ನಿಬಂಧನೆಯನ್ನು ಸೇರಿಸಲಾಗಿದೆ. ಸಂವಿಧಾನದ (129) ತಿದ್ದುಪಡಿ ವಿಧೇಯಕದ 2ನೇ ಉಪ ಕಲಂ 5ರ ಪ್ರಕಾರ ಲೋಕಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯ ಜತೆಗೆ ಯಾವುದಾದರೂ ವಿಧಾನಸಭೆಯ ಚುನಾವಣೆ ನಡೆಸಲು ಆಗುವುದಿಲ್ಲ ಎಂದು ಚುನಾವಣಾ ಆಯೋಗ ಅಭಿಪ್ರಾಯಪಟ್ಟರೆ ಆ ಕುರಿತು ರಾಷ್ಟ್ರಪತಿಯವರಿಗೆ ಶಿಫಾರಸು ಮಾಡಬಹುದು. ಅದನ್ನು ಆಧರಿಸಿ ರಾಷ್ಟ್ರಪತಿಯವರು ಆ ವಿಧಾನ ಸಭೆಯ ಚುನಾವಣೆಯನ್ನು ಆ ನಂತರ ನಡೆಸಲು ಆದೇಶ ಹೊರಡಿಸಬಹುದು ಎಂಬ ಅಂಶವನ್ನು ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ.

ಹೊಸ ವಿಧಿ ಮೂರು ತಿದ್ದುಪಡಿ: ಸಂವಿಧಾನದಲ್ಲಿ ಒಂದು ಹೊಸ ವಿಧಿ ಸೇರಿಸಲು ಹಾಗೂ ಮೂರು ವಿಧಿಗಳಿಗೆ ತಿದ್ದುಪಡಿ ತರಲು ವಿಧೇಯಕದಲ್ಲಿ ಪ್ರಸ್ತಾಪ ಮಾಡಲಾಗಿದೆ. ಹೊಸದಾಗಿ 82ಎ ವಿಧಿಯನ್ನು ಸೇರಿಸಲು ವಿಧೇಯಕ ಪ್ರಸ್ತಾಪಿಸಿದೆ. ಅದು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಲು ಅನುವು ಮಾಡಿಕೊಡುತ್ತದೆ. ಅಲ್ಲದೆ ವಿಧಿ 83 (ಸಂಸತ್ತಿನ ಕಾಲಾವಧಿ) ವಿಧಿ 172 (ರಾಜ್ಯ ಶಾಸಕಾಂಗಗಳ ಕಾಲಾವಧಿ) ಹಾಗೂ ವಿಧಿ 327 ಅನ್ನು (ರಾಜ್ಯ ಶಾಸಕಾಂಗಗಳ ಚುನಾವಣೆ ಸಂಸತ್ತಿಗೆ ಅಧಿಕಾರ ಕುರಿತು) ತಿದ್ದುಪಡಿ ಮಾಡಬೇಕು ಎಂದು ಹೇಳಿದೆ.

ಅಧಿಕಾರಾವಧಿ: ಸಾರ್ವತ್ರಿಕ ಚುನಾವಣೆ ಬಳಿಕ ಲೋಕಸಭೆಯ ಮೊದಲ ಅಧಿವೇಶನದ ದಿನದಂದು ರಾಷ್ಟ್ರಪತಿಯವರು ಅಧಿಸೂಚನೆ ಹೊರಡಿಸಬೇಕು. ಅದನ್ನು 'ನೇಮಕದ ದಿನ' ಎಂದು ಕರೆಯಲಾಗುತ್ತದೆ. ಆ ದಿನದಿಂದ ಲೋಕಸಭೆಯ ಅಧಿಕಾರಾವಧಿ ಐದು ವರ್ಷಗಳಾಗಿರುತ್ತವೆ. ಇದೇ ರೀತಿ ಚುನಾವಣೆ ಬಳಿಕ ನಿಗದಿತ ದಿನದಿಂದ ರಾಜ್ಯ ಶಾಸಕಾಂಗಗಳ ಅಧಿಕಾರಾವಧಿ ಆರಂಭವಾಗುತ್ತದೆ. ಅದು ಲೋಕಸಭೆಯ ಪೂರ್ಣಾವಧಿ ಜತೆಗೆ ಕೊನೆಯಾಗುತ್ತದೆ. ಹೀಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ನಡೆಯುವ ಸಾರ್ವತ್ರಿಕ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಬಹುದು ಎಂದು ವಿಧೇಯಕದಲ್ಲಿ ಹೇಳಲಾಗಿದೆ.

ಸರಕಾರ ಪತನವಾದರೆ ಏನಾಗಲಿದೆ?

ಅತಂತ್ರ ವಿಧಾನಸಭೆ ನಿರ್ಮಾಣವಾದರೆ ಅಥವಾ ಅವಿಶ್ವಾಸ ಮತಯಾಚನೆಯಿಂದ ಸರಕಾರ ಪತನವಾದರೆ, ಹೊಸದಾಗಿ ಚುನಾವಣೆ ನಡೆಯುತ್ತದೆ. ಆಗ ಆಯ್ಕೆಯಾಗುವ ಸರಕಾರ ಮುಂದಿನ ಸಾರ್ವತ್ರಿಕ ಚುನಾವಣೆವರೆಗೂ ಮಾತ್ರ ಇರುತ್ತದೆ. ಅಂದರೆ ಸರಕಾರ ರಚನೆಯಾಗಿ ಎರಡು ವರ್ಷವಾದ ಬಳಿಕ ಸರಕಾರ ಪತನವಾದರೆ, ಮತ್ತೆ ಚುನಾವಣೆ ನಡೆದು ಹೊಸದಾಗಿ ಆಯ್ಕೆಯಾಗುವ ಸರಕಾರ ಎರಡೂವರೆ ಅಥವಾ ಮೂರು ವರ್ಷ ಮಾತ್ರ ಆಡಳಿತ ನಡೆಸಲಿದೆ. ಇದು ವಿಧಾನಸಭೆಗೆ ಮಾತ್ರವಲ್ಲದೇ ಲೋಕಸಭೆಗೂ ಅನ್ವಯವಾಗಲಿದೆ. ಸರಕಾರ ಪತನವಾದರೆ ಬಾಕಿಯಿರುವ ಅವಧಿಗೆ ಮಾತ್ರ ಚುನಾವಣೆ ನಡೆಯಲಿದೆ.

ಹೇಗಿರಲಿದೆ ಚುನಾವಣೆ ವ್ಯವಸ್ಥೆ?

ಒಂದು ದೇಶ, ಒಂದು ಚುನಾವಣೆ ಅನುಷ್ಠಾನವಾದರೆ, ಮೊದಲ ಬಾರಿ ರಾಷ್ಟ್ರಪತಿಗಳು ಲೋಕಸಭೆಯ ಆಡಳಿತ ಅವಧಿಯನ್ನು ನೋಟಿಫಿಕೇಶನ್ ಮಾಡುತ್ತಾರೆ. ಈ ಅಧಿಸೂಚನೆಯಂತೆ ಇಡೀ ದೇಶದ ಎಲ್ಲ ರಾಜ್ಯಗಳ ವಿಧಾನಸಭೆಗೂ ಕೂಡ ಲೋಕಸಭೆಯ ಅವಧಿ ಅನ್ವಯವಾಗಲಿದೆ. ಆ ಸಮಯದಲ್ಲಿ ಹೊಸದಾಗಿ ರಚನೆಯಾದ ರಾಜ್ಯ ಸರಕಾರಗಳ ಅವಧಿ ಮೊಟಕುಗೊಂಡು, ಮುಂದಿನ ಸಾರ್ವತ್ರಿಕ ಚುನಾವಣೆ ವೇಳೆಯೇ ಅವುಗಳಿಗೂ ಚುನಾವಣೆ ನಡೆಯುತ್ತದೆ. ಅಲ್ಲಿಂದ ಒಂದು ರಾಷ್ಟ್ರ ಒಂದು ಚುನಾವಣೆ ಪದ್ಧತಿ ಜಾರಿಗೆ ಬರುತ್ತದೆ.

ವಿಧೇಯಕದಲ್ಲಿರುವ ಅಂಶಗಳು ಏನು?

- ಸಂವಿಧಾನದ 82ಎ ಹಾಗೂ 324ಎ ವಿಧಿಗಳಿಗೆ ತಿದ್ದುಪಡಿ
- ಎರಡು ಹಂತಗಳಲ್ಲಿ ಏಕಕಾಲದ ಚುನಾವಣೆ
- ಮೊದಲು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ
- 100 ದಿನಗಳ ಒಳಗೆ ಮುನಿಸಿಪಾಲಿಟಿ -ಪಂಚಾಯಿತಿ ಎಲೆಕ್ಷನ್
- ಮೂರು ಮಟ್ಟದ ಚುನಾವಣೆಗೆ ಒಂದೇ ಮತದಾರರ ಪಟ್ಟಿ

ಗದ್ದಲ, ಕೋಲಾಹಲಗಳ ನಡುವೆಯೇ ವಿಧಾನಸಭೆಯಲ್ಲಿ ಅಪರೂಪದ ವಿದ್ಯಮಾನ

ರಾತ್ರಿ 1 ಗಂಟೆವರೆಗೂ ನಡೆದ ಸದನ ಕಲಾಪ

ಸುವರ್ಣಸೌಧ ಬೆಳಗಾವಿ: ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಸೋಮವಾರ ತಡರಾತ್ರಿ 1 ಗಂಟೆಯವರೆಗೆ ನಡೆಸುವ ಮೂಲಕ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ವಿಶಿಷ್ಟ ದಾಖಲೆಯೊಂದನ್ನು ಬರೆದಿದ್ದಾರೆ.

ಸೋಮವಾರ ಬೆಳಗ್ಗೆ ಭಾವಚಿತ್ರ ಅನಾವರಣ, ಸಂತಾಪ, ಉತ್ತರ ಕರ್ನಾಟಕದ ಮೇಲಿನ ಚರ್ಚೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದರಿಂದ ಪ್ರಶ್ನೋತ್ತರ ಹಾಗೂ ಗಮನ ಸೆಳೆಯುವ ಸೂಚನೆಗಳನ್ನು ಎತ್ತಿಕೊಂಡಿರಲಿಲ್ಲ. ಆದರೆ ಅಜೆಂಡಾದಲ್ಲಿ 60 ಗಮನ ಸೆಳೆಯುವ ಸೂಚನೆಗಳ ವಿಷಯದ ಚರ್ಚೆ ಸೇರಿಸಲಾಗಿತ್ತು. ಸಂಜೆ ಆರರ ಬಳಿಕ ಪ್ರಶ್ನೋತ್ತರವನ್ನು ಎತ್ತಿಕೊಂಡ ಯು.ಟಿ.ಖಾದರ್ ಅವರು, ಗಮನ ಸೆಳೆಯುವ ಚರ್ಚೆಯನ್ನು 10 ಗಂಟೆಯ ಹೊತ್ತಿಗೆ ಕೈಗೆತ್ತಿಕೊಂಡರು. ಈ ಎಲ್ಲ ಪ್ರಕ್ರಿಯೆ ಪೂರ್ಣಗೊಳ್ಳುವ ವೇಳೆಗೆ ರಾತ್ರಿ ಒಂದು ಗಂಟೆಯಾಯಿತು. ಇತ್ತೀಚಿನ ವರ್ಷಗಳಲ್ಲಿ ಸುದೀರ್ಘ ಕಾಲ ನಡೆದ ಕಲಾಪ ಎನ್ನುವ ದಾಖಲೆ ಬರೆದಿದೆ. ಮಂಗಳವಾರ ಬೆಳಗ್ಗೆ ಮಾತನಾಡಿದ ಬೈರತಿ ಬಸವರಾಜ್, ರಾತ್ರಿ ಒಂದು ಗಂಟೆಯ ತನಕ ಸದನ ನಡೆಸುವ ಮೂಲಕ ಗಿನ್ನಿಸ್ ದಾಖಲೆ ಬರೆಯಲು ಸ್ಪೀಕರ್ ಮುಂದಾಗಿದ್ದಾರೆ ಎಂದು ಕಿಚಾಯಿಸಿದರು.

ಶಾಸಕರ ಬೇಸರ

ಖಾದರ್ ಅವರು ತಡರಾತ್ರಿವರೆಗೆ ಸದನ ನಡೆಸಿದ್ದನ್ನು ಮೇಲ್ನೋಟಕ್ಕೆ ಹಲವು ಶಾಸಕರು ಸ್ವಾಗತಿಸಿದ್ದಾರೆ. ಆದರೆ ಆಫ್ ದಿ ರೆಕಾರ್ಡ್ ಮಾತನಾಡುವಾಗ, ಅಜೆಂಡಾ ಮುಗಿಸಬೇಕು ಎನ್ನುವ ಕಾರಣಕ್ಕೆ ಈ ರೀತಿ ಮಾಡುವುದು ಸರಿಯಲ್ಲ. ಮಧ್ಯರಾತ್ರಿ ನಡೆದ ಚರ್ಚೆಯಲ್ಲಿ ಬಹುತೇಕ ಸಚಿವರು ಗೈರಾಗಿದ್ದರು. ದಾಖಲೆಗಳಿಗಾಗಿ ಕಲಾಪದಲ್ಲಿ ವಿಷಯ ಪ್ರಸ್ತಾಪಿಸಿದಂತಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಈ ರೀತಿ ಮಾಡುವ ಬದಲು, ಬದಲಿ ವ್ಯವಸ್ಥೆಗೆ ಚಿಂತಿಸುವುದು ಸೂಕ್ತ. ಸೋಮವಾರ ರಾತ್ರಿ ನಡೆದ ಕಲಾಪದಲ್ಲಿ ಆಯಾ ಶಾಸಕರು ಅವರ ವಿಷಯ ಬರುವ ತನಕ ಮಾತ್ರ ಕೂತಿದ್ದರು. ಆದ್ದರಿಂದ ಮುಂದೆ ಈ ರೀತಿ ತಡರಾತ್ರಿವರೆಗೆ ನಡೆಸುವುದು ಬೇಡ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

- ಇತ್ತೀಚಿನ ವರ್ಷಗಳಲ್ಲಿ ಸುದೀರ್ಘ ಕಾಲ ನಡೆದ ಕಲಾಪ
- ಸುಮಾರು 50ಕ್ಕೂ ಗಮನ ಸೆಳೆವ ವಿಷಯ ಪ್ರಸ್ತಾಪ

ಸಭಾಧ್ಯಕ್ಷರು ಒಂದು ಗಂಟೆವರೆಗೆ ಸದನ ನಡೆಸಿದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ ಸಚಿವರೇ ಇರುವುದಿಲ್ಲ. ಈ ಸರಕಾರ ಏಕ ಸಚಿವ ಸರಕಾರ ಎನ್ನುವಂತಾಗಿದೆ. ಸೋಮವಾರ ರಾತ್ರಿ ಒಂದು ಗಂಟೆಯ ತನಕ ಕಲಾಪ ನಡೆಸಿದಾಗಲೂ ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತ್ರ ಇದ್ದರು. ಮಂಗಳವಾರ ಬೆಳಗ್ಗೆಯೂ ಕೃಷ್ಣಬೈರೇಗೌಡ ಬಿಟ್ಟು ಇನ್ಯಾವ ಸಚಿವರೂ ಸದನಕ್ಕೆ ಬಂದಿಲ್ಲ.

-ಸುನೀಲ್ ಕುಮಾರ್ ಶಾಸಕ

ಪಾರದರ್ಶಕತೆ, ದಕ್ಷತೆ ಹೆಚ್ಚಿಸಲು ಸರಕಾರ ನಿರ್ಧಾರ

ಮುಡಾ ವಿಧೇಯಕ ಮಂಡನೆ

ಸುವರ್ಣಸೌಧ ಬೆಳಗಾವಿ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಪಾರದರ್ಶಕ ಹಾಗೂ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ವಿಧಾನಸಭೆಯಲ್ಲಿ 'ಮುಡಾ ವಿಧೇಯಕ'ವನ್ನು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಮಂಗಳವಾರ ಮಂಡಿಸಿದರು.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರಕಾರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವನ್ನು ಬಿಡಿಎ ಮಾದರಿಯಲ್ಲಿ ರಚಿಸಲು ತೀರ್ಮಾನಿಸಿತ್ತು. ಇದರ ಮುಂದುವರಿದ ಭಾಗವಾಗಿ ಮಂಗಳವಾರ ವಿಧೇಯಕ ಮಂಡಿಸಲಾಗಿದ್ದು, ಈ ವಿಧೇಯಕದ ಮೂಲಕ ಇಷ್ಟು ದಿನ ನಗರಾಭಿವೃದ್ಧಿ ಇಲಾಖೆಯ ಸುಪರ್ದಿಯಲ್ಲಿದ್ದ ಮುಡಾ ಇನ್ಮುಂದೆ ನಗರಾಭಿವೃದ್ಧಿಯಲ್ಲಿದ್ದರೂ ಬಿಡಿಎಯಂತೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚಿಸಿ ಸ್ವತಂತ್ರ ತೀರ್ಮಾನ ಕೈಗೊಳ್ಳಲು ಅವಕಾಶ ನೀಡಲಾಗಿದೆ.

→ 8

ಏನೇನು ಅಧಿಕಾರ?

ಪ್ರಾಧಿಕಾರ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬಹುದಾಗಿದೆ. ಜತೆಗೆ ಸರಕಾರದ ಪೂರ್ವಾನುಮತಿ ಮೇರೆಗೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬಹುದಾಗಿದೆ. ಭೂ ಸ್ವಾಧೀನ, ಸುಧಾರಣಾ ತೆರಿಗೆ ವಿಧಿಸುವ ಅಧಿಕಾರ, ಭೂಮಿ ಮತ್ತು ಕಟ್ಟಡಗಳಿಗೆ ತೆರಿಗೆ ವಿಧಿಸುವುದು, ರಸ್ತೆ ನಿರ್ವಹಣೆ, ಬಡಾವಣೆ ನಿರ್ಮಾಣ ಸೇರಿದಂತೆ ಕೆಲ ಹೆಚ್ಚುವರಿ ಅಧಿಕಾರ ನೀಡಲಾಗಿದೆ.

1,394 ಔಷಧಗಳು ಗುಣಮಟ್ಟ ಹೊಂದಿಲ್ಲ

ದೆಹಲಿ: 2023-24ರಲ್ಲಿ 1,394 ಔಷಧಗಳು ಪ್ರಮಾಣಿತ ಗುಣಮಟ್ಟ ಪರೀಕ್ಷೆಯಲ್ಲಿ ವೈಫಲ್ಯ ಕಂಡಿವೆ ಎಂದು ಕೇಂದ್ರ ಸರಕಾರವು ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ.

2019-20ರಲ್ಲಿ 950 ಹಾಗೂ 2022-23ರಲ್ಲಿ 1,171 ಔಷಧಗಳು ಪ್ರಮಾಣಿತ ಗುಣಮಟ್ಟ ಹೊಂದಿರಲಿಲ್ಲವೆಂದು ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಘಟನೆ ವರದಿ ನೀಡಿದೆ ಎಂದು ಕೇಂದ್ರ ಆರೋಗ್ಯ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಕಳಪೆ ಗುಣಮಟ್ಟ ಹೊಂದಿರುವ ತಯಾರಿಸಿದ ಕಂಪನಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗಿದೆ ಎಂದು ರಾಜ್ಯಸಭೆಗೆ ತಿಳಿಸಿದ್ದಾರೆ.

ಉನ್ನತಮಟ್ಟದ ತನಿಖೆಗೆ ಸರಕಾರ ಸಿದ್ಧ: ಗುಂಡೂರಾವ್

ಬಾಣಂತಿಯರ ಸಾವು: ಚರ್ಚೆ

ಸುವರ್ಣಸೌಧ: ಬಳ್ಳಾರಿಯಲ್ಲಿ ಬಾಣಂತಿಯರ ಸರಣಿ ಸಾವಿನ ಪ್ರಕರಣವನ್ನು ಎಸ್‌ಐಟಿ ಅಥವಾ ನ್ಯಾಯಾಂಗದ ಮೂಲಕ ತನಿಖೆ ನಡೆಸಲು ಸರಕಾರ ಸಿದ್ಧವಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಬಾಣಂತಿಯರ ಸಾವಿನ ಬಗ್ಗೆ ವಿಶೇಷ ಚರ್ಚೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಹೆಚ್ಚುತ್ತಿರುವ ಬಾಣಂತಿಯರ ಸಾವಿಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಎಸ್‌ಐಟಿ ಹಾಗೂ ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡುತ್ತಿದ್ದು, ಸರಕಾರ ಈ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಸಿದ್ಧವಿದೆ. ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಕಲಬುರಗಿಯಲ್ಲಿ ಮತ್ತೊಂದು ಮರಣ

ಕಲಬುರಗಿ: ಜಿಲ್ಲಾ ಆಸ್ಪತ್ರೆಯಲ್ಲಿ ಅಫಜಲಪುರ ತಾಲೂಕಿನ ಬಾಣಂತಿಯೊಬ್ಬರು ಮಂಗಳವಾರ ಮೃತಪಟ್ಟಿದ್ದಾರೆ.

ಅಫಜಲಪುರ ತಾಲೂಕಿನ ಹವಳಗಾ ಗ್ರಾಮದ ಭಾಗ್ಯಶ್ರೀ ಶಿವಾಜಿ (22) ಮೃತ ಬಾಣಂತಿ. ವೈದ್ಯರ ನಿರ್ಲಕ್ಷವೇ ಬಾಣಂತಿ ಸಾವಿಗೆ ಕಾರಣವೆಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಮಧ್ಯಂತರ ವಾರ್ಷಿಕ ವರದಿ ಮಂಡನೆ

ಸುವರ್ಣಸೌಧ ಬೆಳಗಾವಿ: ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಸರಕಾರ ಮಂಡಿಸಿದೆ. ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದರೂ, 27534 ಕೋಟಿ ರು. ರಾಜಸ್ವದ ಕೊರತೆಯಿದೆ ಎನ್ನುವುದು ಮಧ್ಯ ವಾರ್ಷಿಕ ಪರಿಶೀಲನಾ ವರದಿಯಲ್ಲಿ ಬಹಿರಂಗವಾಗಿದೆ.

- 27,534 ಕೋಟಿ ರು. ರಾಜಸ್ವ ಕೊರತೆ
- ಜಿಎಸ್‌ಟಿ ಸಂಗ್ರಹದಲ್ಲಿ 2ನೇ ಸ್ಥಾನ

ಈ ವರದಿಯಲ್ಲಿ ರಾಜಸ್ವದ ಕೊರತೆಯ ಹೊರತಾಗಿಯೂ, ರಾಜ್ಯದ ಪಾಲಿನ ಜಿಎಸ್‌ಟಿ (ಎಸ್‌ಜಿಎಸ್‌ಟಿ) ಸಂಗ್ರಹದಲ್ಲಿ ಕರ್ನಾಟಕವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವಿತ್ತೀಯ (2024-25) ವರ್ಷದಲ್ಲಿ ಜಿಎಸ್‌ಟಿ ಸಂಗ್ರಹದಲ್ಲಿ ಶೇ.11ರಷ್ಟು ಬೆಳವಣಿಗೆಯಾಗಿದೆ. ಇದು ವರ್ಷದ ಮೊದಲಾರ್ಧದ ಸಂಗ್ರಹವಾಗಿದೆ ಎಂದು ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ವರದಿ ತಿಳಿಸಿದೆ.

ಡಿ ಗ್ಯಾಂಗ್ ವಿರುದ್ಧ ಮೇಲ್ಮನವಿಗೆ ಸಿದ್ಧತೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿ 7 ಆರೋಪಿಗಳಿಗೆ ಹೈಕೋರ್ಟ್ ಜಾಮೀನು ಮಂಜೂರು ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್ ಮೊರೆ ಹೋಗಲು ಪೊಲೀಸರು ನಿರ್ಧರಿಸಿದ್ದಾರೆ. ಈ ಕುರಿತು ಗೃಹ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಪೂರ್ವಾನುಮತಿ ದೊರೆತ ಬಳಿಕ ಸುಪ್ರೀಂನಲ್ಲಿ ಪ್ರಶ್ನಿಸುವುದಾಗಿ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ತಿಳಿಸಿದ್ದಾರೆ.

ಫೆಬ್ರವರಿಗೆ ಬಿಜೆಪಿ ಅಧ್ಯಕ್ಷರ ಬದಲು?

ದೆಹಲಿ: ಬಿಜೆಪಿಗೆ ಹೊಸ ರಾಷ್ಟ್ರೀಯ ಅಧ್ಯಕ್ಷರನ್ನು ಫೆಬ್ರವರಿ ಮಾಸಾಂತ್ಯದಲ್ಲಿ ಆಯ್ಕೆ ಮಾಡುವ ಸಾಧ್ಯತೆಯಿದೆ. ಬಿಜೆಪಿಯ ರಾಜ್ಯ ಘಟಕಗಳಲ್ಲಿ ಶೇ.60ರಷ್ಟರಲ್ಲಿ ಅಧ್ಯಕ್ಷರ ಅಧಿಕಾರಾವಧಿ ಪೂರ್ಣಗೊಂಡಿದೆ. ಈ ರಾಜ್ಯ ಘಟಕಗಳಿಗೆ ಹೊಸ ಅಧ್ಯಕ್ಷರನ್ನು ಜನವರಿಯಲ್ಲಿ ನೇಮಕ ಮಾಡುವ ಸಾಧ್ಯತೆಯಿದೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಬಿಲ್ಡರ್‌ಗಳಿಗೆ ಐಟಿ ಶಾಕ್; 5 ಕಡೆ ದಾಳಿ

ಬೆಂಗಳೂರು: ತೆರಿಗೆ ವಂಚನೆ ಆರೋಪದ ಮೇಲೆ ಬೆಂಗಳೂರಿನಲ್ಲಿನ ಬಿಲ್ಡರ್‌ಗಳಿಗೆ ಸಂಬಂಧಿಸಿದ ಐದು ಕಡೆ ಐಟಿ ಅಧಿಕಾರಿಗಳು ಏಕಕಾಲಕ್ಕೆ ದಾಳಿ ಮಾಡಿದ್ದಾರೆ. ಒಂದೇ ತಿಂಗಳ ಅಂತರದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಮೂರನೇ ದಾಳಿ ಇದಾಗಿದೆ. ಕಳೆದ ತಿಂಗಳು ನ.27 ರಂದು ಬೆಂಗಳೂರಿನ 25ಕ್ಕೂ ಹೆಚ್ಚು ಕಡೆ ಉದ್ಯಮಿಗಳು, ಬಿಲ್ಡರ್‌ಗಳ ಮನೆ ಮತ್ತು ಕಚೇರಿ ಮೇಲೆ ಏಕಕಾಲಕ್ಕೆ ದಾಳಿ ಮಾಡಿದ್ದರು.

ಪಾಕ್‌ನಲ್ಲಿ ಪ್ರಿಯಾಂಕಾ ಗಾಂಧಿ ಗುಣಗಾನ

ದೆಹಲಿ: ಪ್ರಿಯಾಂಕಾ ಗಾಂಧಿ ಅವರು ಅಧಿವೇಶನಕ್ಕೆ 'ಪ್ಯಾಲೆಸ್ತೀನ್' ಎಂದು ಬರೆದಿರುವ ಬ್ಯಾಗ್ ಹಿಡಿದು ಹೋಗಿರುವುದಕ್ಕೆ ಪಾಕಿಸ್ತಾನದ ಮಾಜಿ ಸಚಿವ ಚೌಧರಿ ಫವಾದ್ ಹುಸೇನ್ ಶ್ಲಾಘಿಸಿದ್ದಾರೆ. ನೆಹರು ಅವರಂತಹ ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ಮೊಮ್ಮಗಳಿಂದ ಇನ್ನೇನು ನಿರೀಕ್ಷಿಸಬಹುದು? ಕುಬ್ಜರ ನಡುವೆ ಪ್ರಿಯಾಂಕಾ ಗಾಂಧಿ ಎತ್ತರವಾಗಿ ನಿಲ್ಲುತ್ತಾರೆ ಎಂದು ಟ್ವೀಟ್ ಮಾಡಿದ್ದಾರೆ.

ಸಂಧ್ಯಾ ಚಿತ್ರಮಂದಿರ ಆಡಳಿತಕ್ಕೆ ನೋಟಿಸ್

ಹೈದರಾಬಾದ್: 'ಪುಷ್ಪ-2' ಚಿತ್ರಪ್ರದರ್ಶನದ ವೇಳೆ ನೂಕುನುಗ್ಗಲು ಸಂಭವಿಸಿದ್ದ ಪ್ರಕರಣದ ಸಂಬಂಧ 'ಸಂಧ್ಯಾ 70 ಎಂಎಂ' ಚಿತ್ರಮಂದಿರದ ಆಡಳಿತವರ್ಗಕ್ಕೆ ಪೊಲೀಸರು ಎರಡು ಪುಟಗಳ ನೋಟಿಸ್ ನೀಡಿದ್ದಾರೆ. ನೋಟಿಸ್‌ನಲ್ಲಿ ಪೊಲೀಸರು ಒಟ್ಟು 11 ತಪ್ಪುಗಳನ್ನು ಪಟ್ಟಿ ಮಾಡಿದ್ದಾರೆ. ಸುರಕ್ಷತಾಕ್ರಮ ಕೈಗೊಳ್ಳದಿರುವ ಕಾರಣಕ್ಕೆ ಏಕೆ ಲೈಸೆನ್ಸ್ ರದ್ದುಪಡಿಸಬಾರದು? ಎಂದು ಪ್ರಶ್ನಿಸಿದ್ದಾರೆ.

ಬೀದರ್‌ನಲ್ಲಿ ಕನಿಷ್ಠ ಉಷ್ಣಾಂಶ 7.5 ಡಿ.ಸೆ., ವಿಜಯಪುರದಲ್ಲಿ 8.5 ಡಿ.ಸೆ. ದಾಖಲು

ಮೈ ಕೊರೆಯುತ್ತಿರುವ ಚಳಿಗೆ ಕಲ್ಯಾಣ ಕರ್ನಾಟಕ ಗಡ ಗಡ

ಕಲಬುರಗಿ: ಕಳೆದ ಮೂರು ದಿನಗಳಿಂದ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಚಳಿ ಹೆಚ್ಚುತ್ತಿದ್ದು, ಜನರನ್ನು ನಡುಗಿಸುತ್ತಿದೆ. ಬೀದರ್ ಜಿಲ್ಲೆಯಲ್ಲಿ ಸೋಮವಾರ ಮತ್ತು ಮಂಗಳವಾರ ರಾಜ್ಯದಲ್ಲೇ ಅತಿ ಕಡಿಮೆ ತಾಪಮಾನ ದಾಖಲಾಗಿದೆ.

ಭಾರತೀಯ ಹವಾಮಾನ ಇಲಾಖೆಯ ವರದಿ ಪ್ರಕಾರ, ಬೀದರ್‌ನಲ್ಲಿ ಕನಿಷ್ಠ ಉಷ್ಣಾಂಶ 7.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ 8.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಜನವರಿಯಲ್ಲಿ ಚಳಿ ಇನ್ನಷ್ಟು ಹೆಚ್ಚಲಿದ್ದು, ದಾಖಲೆಯ ಅತಿ ಕಡಿಮೆ ತಾಪಮಾನ ದಾಖಲಾಗಲಿದೆ ಎಂದು ತಿಳಿಸಿದೆ.

ಬೀದರ್ ಜಿಲ್ಲೆಯಲ್ಲಿ 2023ರ ಜನವರಿ 9ರಂದು ತಾಪಮಾನ 5.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಈ ವರ್ಷ ಆ ದಾಖಲೆಯನ್ನು ದಾಟಿ 5 ಡಿಗ್ರಿ ಸೆಲ್ಸಿಯಸ್‌ಗೆ ಉಷ್ಣಾಂಶ ಇಳಿಯುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ. ರಾಯಚೂರಿನಲ್ಲಿ 13 ಡಿಗ್ರಿ ಸೆಲ್ಸಿಯಸ್ ಹಾಗೂ ಕಲಬುರಗಿಯಲ್ಲಿ 13 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಥಂಡಾ ಹೊಡೆದ ಬೆಂಗಳೂರಿಗರು; ಬೆಂಗಳೂರು ನಗರದಲ್ಲಿ ಈ ಬಾರಿ ಭಾರೀ ಚಳಿ ಶುರುವಾಗಿದ್ದು, ಮಂಗಳವಾರದ ಬಳಿಕ ಡಿಸೆಂಬರ್ ತಿಂಗಳಲ್ಲೇ ಅತಿ ಹೆಚ್ಚು ಚಳಿ ದಾಖಲಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಈ ವರ್ಷ ಸುರಿದ ಭಾರಿ ಮಳೆಯಿಂದಾಗಿ ಚಳಿಯ ಪ್ರಮಾಣ ಹೆಚ್ಚಾಗಿದ್ದು, ಈ ಮೂಲಕ 14 ವರ್ಷಗಳ ದಾಖಲೆ ಮುರಿಯಲಿದೆ. 2011 ಡಿ.24ರಂದು ಬೆಂಗಳೂರಿನಲ್ಲಿ 12.8 ಡಿ.ಸೆ.ಗೆ ಕುಸಿದಿದ್ದು ಈವರೆಗಿನ ದಾಖಲೆಯಾಗಿತ್ತು. 1884 ಜನವರಿ 13ರಂದು ಬೆಂಗಳೂರಿನಲ್ಲಿ ತಾಪಮಾನ 7.8 ಡಿ.ಸೆ.ಗೆ ಕುಸಿದಿದ್ದು ಈವರೆಗಿನ ದಾಖಲೆಯಾಗಿದೆ. ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರು ತಾಪಮಾನ ಸರಾಸರಿ ಕನಿಷ್ಠ 15.7 ಡಿ.ಸೆ. ಇರುತ್ತದೆ. ಭಾನುವಾರ ರಾತ್ರಿ 15.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಎಚ್‌ಎಎಲ್ ವಿಮಾನ ನಿಲ್ದಾಣದ ಪ್ರದೇಶದಲ್ಲಿ 14.7 ಡಿ.ಸೆ. ಮತ್ತು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 14.5 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತವಾಗಿತ್ತು.

- ಜನವರಿಯಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಚಳಿ ಇನ್ನಷ್ಟು ಹೆಚ್ಚಳ, ಅತಿ ಕಡಿಮೆ ತಾಪಮಾನ ದಾಖಲು
- ಬಿಸಿಲಿನ ಹೊಡೆತಕ್ಕೆ ಮಣಿಯದ ಜನರು ಕೊರೆಯುವ ಚಳಿಗೆ ತತ್ತರಿಸಿ ಹೋಗಿದ್ದಾರೆ
- ಬೆಂಗಳೂರಿನಲ್ಲಿ ತಾಪಮಾನ 12.8 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತ, 14 ವರ್ಷಗಳ ಬಳಿಕ 7.8 ಕ್ಕಿಂತ ಕೆಳಕ್ಕಿಳಿಯುವ ಸಾಧ್ಯತೆ

ಡಿ.26ರಂದು ಎಐಸಿಸಿ ಕಾರ್ಯಕಾರಿ ಸಭೆ ಆಯೋಜನೆ: ಕೆ.ಸಿ.ವೇಣುಗೋಪಾಲ್

ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

1924ರಲ್ಲಿ ಬೆಳಗಾವಿ ನೆಲದಲ್ಲಿ ಮಹಾತ್ಮಾ ಗಾಂಧಿ ಅಧ್ಯಕ್ಷತೆ ವಹಿಸಿದ್ದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವವನ್ನು ಅರ್ಥಪೂರ್ಣ ಆಚರಿಸಲು ಕಾಂಗ್ರೆಸ್ ಸಿದ್ಧತೆ ನಡೆಸಿದ್ದು, ಡಿ.26ರಂದು ಎಐಸಿಸಿ ಕಾರ್ಯಕಾರಿ ಸಭೆ ಆಯೋಜನೆ ಮಾಡಲಾಗುವುದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದರು.

ಬೆಳಗಾವಿಯ ಸಿ.ಪಿ.ಎಡ್ ಮೈದಾನದಲ್ಲಿ ಡಿಸೆಂಬರ್ 26 ಹಾಗೂ 27 ರಂದು ನಡೆಯಲಿರುವ 'ಗಾಂಧಿ ಭಾರತ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ' ಕಾರ್ಯಕ್ರಮದ ಅಂಗವಾಗಿ ಸಿದ್ಧತಾ ಸಭೆ ಉದ್ದೇಶಿಸಿ ಮಂಗಳವಾರ ನಗರದ ಕಾಂಗ್ರೆಸ್ ಭವನದಲ್ಲಿ ಮಾತನಾಡಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮಾ ಗಾಂಧೀಜಿ ಶಾಂತಿಯುತ, ಅಹಿಂಸಾತ್ಮಕ ಹೋರಾಟಕ್ಕೆ ಕರೆ ನೀಡಿದ್ದರು.

→ 8



ಬೆಳಗಾವಿಯ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿದರು. ಸಿಎಂ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್ ಸಿಂಗ್ ಸುರ್ಜೆವಾಲಾ, ಕೆ.ಸಿ.ವೇಣುಗೋಪಾಲ್ ಮತ್ತಿತರರು ಇದ್ದರು.

ಬೆಳಗಾವಿ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಕಾರ್ಯಕ್ರಮ ಹಿನ್ನೆಲೆಯಲ್ಲಿ ಬೆಳಗಾವಿ ಸುವರ್ಣಸೌಧದ ಮುಂದೆ ಮಹಾತ್ಮಾ ಗಾಂಧಿಯವರ ಪುತ್ಥಳಿ ಅನಾವರಣ ನಡೆಯಲಿದ್ದು, ಎಲ್ಲ ಪಕ್ಷಗಳ ಮುಖಂಡರಿಗೂ ಆಹ್ವಾನ ನೀಡಲಿದ್ದೇವೆ. ರಾಜ್ಯಾದ್ಯಂತ ಪಕ್ಷಭೇದ ಮರೆತು ಜನರು ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಬೆಳಗಾವಿ ಮುಖಂಡರ ಸಭೆ ನಡೆಸಲಾಗಿದ್ದು, ಕಾರ್ಯಕ್ರಮದ ತಯಾರಿ ನಡೆಯುತ್ತಿವೆ.

ಡಿ.ಕೆ.ಶಿವಕುಮಾರ್ ಡಿಸಿಎಂ

ಫನ್‌ತರಂಗ

- ರಘುಪತಿ ಶೃಂಗೇರಿ -

'ನನಗಿಂತ ಬೆಕ್ಕನ್ನೇ ಜಾಸ್ತಿ ಪ್ರೀತಿಸ್ತಾನೆ' ಎಂದು ಗಂಡನ ಮೇಲೆ ಕೇಸ್ ದಾಖಲಿಸಿದ ಮಹಿಳೆ ಸುದ್ದಿ

ಸಮಾಚಾರ ಸಣ್ಣದಲ್ಲ

ಕನ್ನಡಕ್ಕೆ ಪ್ರಾಧಾನ್ಯತೆ ಇರಲಿ: ಕರವೇ ಎಚ್ಚರಿಕೆ

ಬಾಗೇಪಲ್ಲಿ: ಶಾಲೆಗಳ ವಾರ್ಷಿಕೋತ್ಸವ ಕಾರ್ಯಕ್ರಮಗಳಲ್ಲಿ ಕನ್ನಡದ ಹಾಡು,ನೃತ್ಯಗಳಿಗೆ ಪ್ರಾಮುಖ್ಯತೆ ಕೊಡಬೇಕು, ಇಲ್ಲದಿದ್ದರೆ ಕರವೇ ವತಿಯಿಂದ ಹೋರಾಟಗಳನ್ನು ಎದುರಿಸಬೇಕಾಗುತ್ತದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ಕೆ.ಎನ್ ಹರೀಶ್ ಎಚ್ಚರಿಕೆ ನೀಡಿದರು. ಪಟ್ಟಣದ ಬಿಇಒ ಕಚೇರಿಯಲ್ಲಿ ಎಲ್ಲ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಗಳಲ್ಲಿ ತಪ್ಪದೇ ಕನ್ನಡ ಭಾಷೆಗೆ ಪ್ರಾಶಸ್ತ್ಯ ನೀಡಲು ಕ್ರಮ ಕೈಗೊಳ್ಳಬೇಕೆಂದು ಕರವೇ ತಾಲೂಕು ಘಟಕದಿಂದ ಬಿಇಒ ವೆಂಕಟೇಶಪ್ಪರವರಿಗೆ ಮನವಿ ಸಲ್ಲಿಸಲಾಯಿತು. ತಾಲೂಕಿನ ಸರಕಾರಿ ಮತ್ತು ಖಾಸಗಿ ಶಾಲೆಗಳ ಶಾಲಾ ವಾರ್ಷಿಕೋತ್ಸವಗಳಲ್ಲಿ ಕನ್ನಡೇತರ ಹಾಡುಗಳಿಗೆ ಮತ್ತು ಭಾಷಣಗಳಿಗೆ ಅವಕಾಶ ಕೊಡಬಾರದು.ಇಲ್ಲದಿದ್ದರೆ ಕರವೇ ಹೋರಾಟಗಳನ್ನು ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆಯನ್ನು ನೀಡಿದರು. ಕರವೇ ಜಿಲ್ಲಾ ಮಹಿಳಾ ಅಧ್ಯಕ್ಷೆ ಸುಜಾತಮ್ಮ, ರಿಯಾಜ್, ಮಂಜುನಾಥ್, ಜಹಾಂಗೀರ್, ಆಟೋ ಘಟಕದ ಅಧ್ಯಕ್ಷ ಜಬಿವುಲ್ಲಾ, ಉಪಾಧ್ಯಕ್ಷ ಇರ್ಷಾದ್ , ನಾರಾಯಣಸ್ವಾಮಿ, ಶಂಕರ್, ಕೃಷ್ಣಪ್ಪ ವೆಂಕಟೇಶ್ ಇದ್ದರು.

ನಂದಿಗಿರಿ ಅತಿಥಿ ಗೃಹ ಕೊಠಡಿ ಸೌಲಭ್ಯ ಇಲ್ಲ

ಚಿಕ್ಕಬಳ್ಳಾಪುರ : ನಂದಿ ಹೋಬಳಿಯ ಪ್ರಸಿದ್ಧ ಪ್ರವಾಸಿ ತಾಣ ನಂದಿಗಿರಿಧಾಮದಲ್ಲಿ ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ನಂದಿಗಿರಿಧಾಮಕ್ಕೆ ಡಿಸೆಂಬರ್ 31 ರ ಸಂಜೆಯಿಂದ 2025ರ ಜನವರಿ 1 ರ ರಾತ್ರಿ 11ರವರೆಗೆ ಸಾರ್ವಜನಿಕರ ಪ್ರವೇಶಕ್ಕೆ ನಿಷೇಧಾಜ್ಞೆಯನ್ನು ವಿಧಿಸಿದೆ. ಪ್ರವಾಸಿಗರಿಗೆ ಅತಿಥಿ ಗೃಹಗಳಲ್ಲಿ ಕೊಠಡಿಗಳ ಕಾಯ್ದಿರಿಸುವುದನ್ನು ರದ್ದುಗೊಳಿಸಿ ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಆದೇಶ ಹೊರಡಿಸಿದ್ದಾರೆ. ಈ ಕುರಿತು ಪ್ರವಾಸಿಗರು ಸಹಕರಿಸಬೇಕು ಎಂದು ತಿಳಿಸಿದ್ದಾರೆ.

ಡಿ.19 ರಂದು ವಿಶ್ವ ಮಾನವ ಹಕ್ಕು ದಿನ

ಚಿಕ್ಕಬಳ್ಳಾಪುರ : ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ವಾರ್ತಾ ಇಲಾಖೆ, ಉನ್ನತಿ ಮಾನವ ಹಕ್ಕುಗಳ ರಕ್ಷಣಾ ಸಂಘ ಗುಡಿಬಂಡೆ ಆಶ್ರಯದಲ್ಲಿ ವಿಶ್ವ ಮಾನವ ಹಕ್ಕುಗಳ ದಿನಾಚರಣೆಯನ್ನು ಡಿಸೆಂಬರ್ 19 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್ ನ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ನೇರಳೆ ವೀರಭದ್ರಯ್ಯ ಭವಾನಿ ಉದ್ಘಾಟಿಸಲಿದ್ದಾರೆ.

ಗೆಜೇಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

ಅಂಗನವಾಡಿಗಳ ಮೇಲ್ದರ್ಜೆಗೇರಿಸಿ

ನಾನಾ ಬೇಡಿಕೆಗಳು | ಜಿಲ್ಲಾಡಳಿತ ಭವನದ ಎದುರು ಅಹೋರಾತ್ರಿ ಧರಣಿ

ಜಿಲ್ಲಾಡಳಿತ ಭವನದ ಎದುರು ಅಂಗನವಾಡಿ ನೌಕರರ ಸಂಘ ಸಿಐಟಿಯುಸಿ ನೇತೃತ್ವದಲ್ಲಿ ಎರಡು ದಿನಗಳ ಬೃಹತ್ ಹೋರಾಟಕ್ಕೆ ಚಾಲನೆ ನೀಡಿದೆ.

ಚಿಕ್ಕಬಳ್ಳಾಪುರ: ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಪ್ರಾರಂಭವಾಗಿ 50 ವರ್ಷವಾಗುತ್ತಿದ್ದು ಪ್ರತ್ಯೇಕ ನಿರ್ದೇಶನಾಲಯ ಮಾಡುವಂತೆ ಒತ್ತಾಯಿಸಿ ಜಿಲ್ಲಾಡಳಿತ ಭವನದ ಎದುರು ರಾಜ್ಯ ಅಂಗನವಾಡಿ ನೌಕರರ ಸಂಘ ಸಿಐಟಿಯುಸಿ ನೇತೃತ್ವದಲ್ಲಿ ಎರಡು ದಿನಗಳ ಬೃಹತ್ ಹೋರಾಟಕ್ಕೆ ಚಾಲನೆ ನೀಡಿದೆ.

ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರ ಸುಮಾರು 3 ಸಾವಿರ ಅಂಗನವಾಡಿ ಕಾರ್ಯಕರ್ತರೊಂದಿಗೆ ಆಹೋರಾತ್ರಿ ನಡೆಸುತ್ತಿರುವ ಧರಣಿ ಉದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಲಕ್ಷ್ಮೀದೇವಮ್ಮ ಮಾತನಾಡಿ, ಅಂಗನವಾಡಿ ನೌಕರರಿಗೆ ಕನಿಷ್ಠ ವೇತನ 15 ಸಾವಿರ ರು.ಜಾರಿ ಮಾಡುವ ಮೂಲಕ 6ನೇ ಗ್ಯಾರಂಟಿ ಮುಖ್ಯಮಂತ್ರಿ ನೀಡಬೇಕು ಎಂದು ಒತ್ತಾಯಿಸಿದರು.

ಕನಿಷ್ಠ 15 ಸಾವಿರ ವೇತನದ ಭರವಸೆ ಸರಕಾರ ಕೂಡಲೇ ಈಡೇರಿಸಬೇಕು. ನಿವೃತ್ತರಿಗೆ ಗ್ರಾಚುಟಿ ಹಣವನ್ನು ಬಿಡುಗಡೆಗೊಳಿಸಬೇಕು.

ಚುನಾವಣೆ ಪೂರ್ವದಲ್ಲಿ ಸರಕಾರ ತನ್ನ ಪ್ರಣಾಳಿಕೆಯಲ್ಲಿ ಅಂಗನವಾಡಿ ನೌಕರರಿಗೆ 15 ಸಾವಿರ ಮತ್ತು ಸಹಾಯಕರಿಗೆ 10 ಸಾವಿರ ವೇತನ ನೀಡುವ ಭರವಸೆ ನೀಡಿತ್ತು. ಆದರೆ, ಅಧಿಕಾರಕ್ಕೆ ಬಂದು ವರ್ಷವಾದರೂ ಭರವಸೆ ಈಡೇರಿಸಿಲ್ಲ. ಇದೀಗ ಅಧಿವೇಶನದಲ್ಲಿ ಅಂಗನವಾಡಿ ನೌಕರರ ಸಮಸ್ಯೆ ಬಗೆಹರಿಸುವ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಎಂಪಿಎಸ್ ಕಾರ್ಡ್ ಇಲ್ಲ :

ಸ್ಥಳೀಯವಾಗಿ ಅಂಗನವಾಡಿ ನೌಕರರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಲಾಖೆ ಕೆಲಸಗಳ ಜತೆಗೆ ಇಲಾಖೇತರ ಕೆಲಸಗಳಲ್ಲೂ ಬಳಸಿಕೊಳ್ಳಲಾಗುತ್ತಿದೆ. ಇದಕ್ಕೆ ಸೂಕ್ತ ಗೌರವಧನ ಕೊಡಬೇಕು. ಚಿಕ್ಕಬಳ್ಳಾಪುರ ಜಿಲ್ಲೆಯ 225 ಅಂಗನವಾಡಿ ನೌಕರರಿಗೆ ಎನ್.ಪಿಎಸ್ ಕಾರ್ಡ್ ಬಂದಿಲ್ಲ. ಎನ್ .ಪಿಎಸ್ ಕಾರ್ಡ್ ಇಲ್ಲವಾದರೆ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಜಿಲ್ಲಾಧಿಕಾರಿಗಳ ಗಮನಕ್ಕೂ ತಂದರೂ ಯಾವುದೇ ಸಮಸ್ಯೆ ಬಗೆಹರಿದಿಲ್ಲ. ಆದ್ದರಿಂದ ಕೂಡಲೇ ಸಮಸ್ಯೆ ಬಗೆಹರಿಸಬೇಕು. ಇಲ್ಲವಾದಲ್ಲಿ ಫೆಬ್ರವರಿ ತಿಂಗಳಲ್ಲಿ ಅನಿರ್ದಿಷ್ಟಾವಧಿ ಹೋರಾಟಕ್ಕೆ ಮುಂದಾಗುತ್ತೇವೆ ಎಂದು ಎಚ್ಚರಿಕೆ ನೀಡಿದರು.

> **ರಾತ್ರಿ ಇಲ್ಲೇ ಮಲಗುತ್ತೇವೆ..!**
>
> **ರಾತ್ರಿ ಇಲ್ಲೇ ಮಲಗುತ್ತೇವೆ. ಯಾವುದೇ ರಕ್ಷಣೆ ಕೊಟ್ಟಿಲ್ಲ. ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಎರಡು ದಿನಗಳ ಕಾಲ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಆಹೋರಾತ್ರಿ ಧರಣೆ ನಡೆಸುತ್ತಿದ್ದೇವೆ. ರಾತ್ರಿಯಿಡೀ ಇಲ್ಲೇ ಮಲಗುತ್ತೇವೆ. ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ನಮಗೆ ಯಾವುದೇ ರಕ್ಷಣೆ ಕೊಟ್ಟಿಲ್ಲ ಎಂದು ದೂರಿದರು.**

ಅವೈಜ್ಞಾನಿಕ ಆಹಾರ :

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಕೆ ರತ್ನಮ್ಮ ಮಾತನಾಡಿ, ಸುಪ್ರೀಂ ಕೋರ್ಟ್ ಆದೇಶದಂತೆ ಸರಕಾರ ಅಂಗನವಾಡಿ ನೌಕರರನ್ನು 3 ಮತ್ತು 4 ದರ್ಜೆ ನೌಕರರನ್ನಾಗಿ ಪರಿಗಣಿಸಬೇಕು. ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸಬೇಕು. ಸರಕಾರ ಅವೈಜ್ಞಾನಿಕವಾಗಿ ಆಹಾರ ವಿತರಣೆ ಮಾಡುತ್ತಿದೆ. ಈ ಆಹಾರವನ್ನು ಮಕ್ಕಳು ಸೇವನೆ ಮಾಡುತ್ತಿಲ್ಲ. ಈ ಹಿಂದಿನಂತೆ ಪ್ರದೇಶವಾರು ಆಹಾರ ನೀಡಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಅಂಗನವಾಡಿ ನೌಕರರ ಸಂಘದ ಭಾಗ್ಯಮ್ಮ, ಮಂಜುಳ, ಶುಭಾ, ಉಮಾ, ಗೀತಾ, ಅಶ್ವತ್ಥಮ್ಮ, ಸೌಭಾಗ್ಯಮ್ಮ, ಪದ್ಮ ಸೇರಿದಂತೆ ಸಾವಿರಾರು ಮಂದಿ ಅಂಗನವಾಡಿ ನೌಕರರು ಭಾಗವಹಿಸಿದ್ದರು.

ಶುಲ್ಕ ಏರಿಕೆಗೆ ಕಾನೂನು ವಿದ್ಯಾರ್ಥಿಗಳ ವಿರೋಧ

ವಿದ್ಯಾರ್ಥಿಗಳು ಅಪರ ಜಿಲ್ಲಾಧಿಕಾರಿ ಮಂಗಳಾ ಅವರಿಗೆ ಮನವಿ ಸಲ್ಲಿಸಿದರು.

ಕೋಲಾರ: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಪರೀಕ್ಷಾ ಶುಲ್ಕ ಏರಿಕೆ ಖಂಡಿಸಿ ನಗರದ ಬಸವಶ್ರೀ ಕಾನೂನು ಕಾಲೇಜು ವಿದ್ಯಾರ್ಥಿಗಳು ಅಪರ ಜಿಲ್ಲಾಧಿಕಾರಿ ಮಂಗಳಾ ಅವರಿಗೆ ಮನವಿ ಸಲ್ಲಿಸಿದರು.

ಎಸ್‌ಎಫ್‌ಐ ಜಿಲ್ಲಾ ಉಪಾಧ್ಯಕ್ಷ ಅಂಬ್ಲಿಕಲ್ ಶಶಿಕುಮಾರ್ ಮಾತನಾಡಿ, ಕರ್ನಾಟಕ ಸರಕಾರ ಕಾನೂನು ವಿಶ್ವವಿದ್ಯಾಲಯದಲ್ಲಿ ದಾಖಲಾತಿ ಶುಲ್ಕ ವರ್ಷದಿಂದ ವರ್ಷಕ್ಕೆ ಏರಿಕೆ ಮಾಡುತ್ತಿದೆ. ಪರೀಕ್ಷೆ ಶುಲ್ಕ ಆರು ತಿಂಗಳಿಗೊಮ್ಮೆ ಹೆಚ್ಚಳದಿಂದ ಬಹುತೇಕ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ ಎಂದು ಆರೋಪಿಸಿದರು.

ಕಡು ಬಡತನದಿಂದ ಬಂದು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ದಾಖಲಾತಿ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಭರಿಸಲಾಗದೆ, ಹೊರೆಯಾಗಿದೆ. ಈ ಕೂಡಲೇ ಕಾನೂನು ಆಯುಕ್ತ ಶಶಿ ಕಿರಣ್‌ಶೆಟ್ಟಿ ಅವರಿಗೆ ಮನವಿಯನ್ನು ರವಾನೆ ಮಾಡಿದರಲ್ಲದೆ ಹೆಚ್ಚುವರಿ ಕಾಲೇಜು ದಾಖಲಾತಿ ಶುಲ್ಕದ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕಾಲೇಜು ವಿದ್ಯಾರ್ಥಿಗಳಾದ ಲಕ್ಷ್ಮಣ್, ಮಹೇಶ್,ಮುನಿರಾಜು, ಸಾಗರ್, ಆಕಾಶ್, ವಿಶ್ವವಾಣಿಸತೀಶ್ ಇದ್ದರು.

ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಗೌರವಧನದ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಡಿಸೆಂಬರ್ 31 ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಚೇರಿ, ಹಾಗೂ ಪುನರ್ವಸತಿ ಕೇಂದ್ರದ ಮುಖ್ಯಸ್ಥರ ಮೊ:9900093399 ಗೆ ಸಂಪರ್ಕಿಸಬಹುದೆಂದು ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಎನ್. ಎಂ.ಜಗದೀಶ ತಿಳಿಸಿದ್ದಾರೆ.

ಮಕ್ಕಳಿಗೆ ಪಠ್ಯೇತರ ಚಟುವಟಿಕೆಗೂ ತೊಡಗಿಸಿ

ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ, ಕಲೋತ್ಸವಕ್ಕೆ ಸಿಇಒ ಚಾಲನೆ

ಪ್ರತಿಭಾ ಕಾರಂಜಿಯಲ್ಲಿ ಜಿಪಂ ಸಿಇಒ ಡಾ.ಬಿ. ಆರ್. ಪೂರ್ಣಿಮಾ ಮಾತನಾಡಿದರು.

ಹಾಸನ: ಶಾಲಾ ಮಕ್ಕಳು ಪಠ್ಯಕ್ಕೆ ಮಾತ್ರ ಸೀಮಿತವಾಗದೇ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು.ಮಕ್ಕಳ ಪ್ರತಿಭೆ ಗುರುತಿಸಲೆಂದೇ ಶಿಕ್ಷಣ ಇಲಾಖೆ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಹಮ್ಮಿಕೊಂಡಿದೆ ಎಂದು ಜಿಪಂ ಸಿಇಒ ಡಾ.ಬಿ. ಆರ್. ಪೂರ್ಣಿಮಾ ತಿಳಿಸಿದರು.

ನಗರದ ವಾಸವಿ ಆಂಗ್ಲ ಶಾಲೆ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಉದ್ಘಾಟಿಸಿ ಮಾತನಾಡಿದರು.

ತಾಲೂಕು ಮಟ್ಟದ ಕಾರ್ಯಕ್ರಮ ನಡೆದು 8 ತಾಲೂಕುಗಳಿಂದ 22 ತಂಡ ಇಲ್ಲಿ ಭಾಗಿಯಾಗಿವೆ. ಧಾರವಾಡದಲ್ಲಿ ರಾಜ್ಯ ಮಟ್ಟದ ಕಾರ್ಯಕ್ರಮವಿದ್ದು, ತೀರ್ಪುಗಾರರು ಜಿಲ್ಲೆಯಿಂದ ಉತ್ತಮ ಮಕ್ಕಳನ್ನು ಕಳಿಸಬೇಕು ಎಂದು ಸಲಹೆ ನೀಡಿದರು.

ಅವರು ರಾಜ್ಯಮಟ್ಟದಲ್ಲಿ ಗೆದ್ದು ನಮ್ಮ ಜಿಲ್ಲೆಗೆ ಒಳ್ಳೆಯ ಹೆಸರು ತರಲಿ ಎಂಬುದು ನಮ್ಮೆಲ್ಲರ ಆಶಯ ಎಂದರು.

ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲಾ ಮಾತನಾಡಿ, 22 ತಂಡಗಳಿಗೆ ಶುಭ ಹಾರೈಸಿ, ನಿಮ್ಮ ಪ್ರತಿಭೆಯಿಂದ ಹಾಸನವನ್ನು ರಾಜ್ಯಮಟ್ಟದಲ್ಲಿ ಗುರುತಿಸಲಿ. ವಿದ್ಯಾರ್ಥಿ ಜೀವನದಲ್ಲಿ ಆಟ,ಊಟ, ಪಾಠ, ನಾಟ್ಯ, ಸಂಗೀತ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದರು.

ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಚ್. ಕೆ. ಪಾಂಡು ಮಾತನಾಡಿ, ಉತ್ತಮ ವಾತಾವರಣ ಹಾಗೂ ಮಕ್ಕಳ ಪ್ರತಿಭೆಗೆ ಸಂಬಂಧ ಪಟ್ಟ ಅವಕಾಶ ಕೊಡುವ ಅವಕಾಶ ಶಿಕ್ಷಕರ ಮೇಲಿದೆ ಎಂದು ಕಿವಿಮಾತು ಹೇಳಿದರು. ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಣ್ಣಪ್ಪ, ಜಿಲ್ಲಾ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಎಲ್. ಚಂದ್ರಪ್ಪ, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಸಿ. ಬಸವರಾಜು, ಬಡ್ತಿ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಡಿ.ಸಿ. ಮಹೇಶ್, ಸಂಪತ್ತು, ಮಂಜುನಾಥ್ ಪಪೂ ನೌಕರರ ಸಂಘದ ಅಧ್ಯಕ್ಷ ಆನಂದ್ ಕೆ.ಬಿ, ಅನುದಾನಿತ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ. ಸಂತೋಷ್ ಇದ್ದರು.

ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಕ್ರಮ ಕೈಗೊಳ್ಳಿ

ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಭೆ ಗೆ ಜಿಲ್ಲಾಧಿಕಾರಿ ಯಶವಂತ್ ಉದ್ಘಾಟಿಸಿದರು.

ರಾಮನಗರ: ಮುಂಬರುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಲು ಅಗತ್ಯ ಕ್ರಮ ಕೈಗೊಂಡು ಫಲಿತಾಂಶದಲ್ಲಿ ಸುಧಾರಣೆ ತರುವಂತೆ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಸಲಹೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಈ ಬಾರಿ 13,579 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯುತ್ತಿದ್ದು, ಅವರೆಲ್ಲರೂ ಉತ್ತೀರ್ಣರಾಗಲು ಅಗತ್ಯ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಕಲಿಕೆ ಅಥವಾ ವಿಷಯ ನ್ಯೂನತೆ ಇರುವ ಮಕ್ಕಳನ್ನು ಗುರುತಿಸಿ ಅವರಿಗೆ ಶಿಕ್ಷಕರು ಸರಿಯಾದ ಮಾರ್ಗದರ್ಶನ ನೀಡಬೇಕು. ಶಿಕ್ಷಕರು ಮಾಡುವ ಸಣ್ಣ ಪ್ರಯತ್ನ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುತ್ತದೆ. ಕೀಳರಿಮೆ ಇರುವ ಮಕ್ಕಳನ್ನು ಗುರುತಿಸಿ ಅವರಲ್ಲಿ ಆತ್ಮ ವಿಶ್ವಾಸ ತುಂಬುವ ಕೆಲಸ ಮಾಡಬೇಕು. ಆ ಮೂಲಕ ಶಾಲೆಯಲ್ಲಿ ಸಕಾರಾತ್ಮಕ ವಾತಾವರಣ ಸೃಷ್ಟಿಮಾಡಬೇಕು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಅವರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು ಎಂದರು. ಮುಖ್ಯವಾಗಿ ಗಣಿತ ಹಾಗೂ ಇಂಗ್ಲೀಷ್ ತರಗತಿಗಳನ್ನು ವಿದ್ಯಾರ್ಥಿಗಳಿಗೆ ಸರಳವಾಗುವ ರೀತಿ ಅರ್ಥಮಾಡಿಸಬೇಕು. ನಿಜ ಜೀವನದ ಉದಾಹರಣೆಗಳೊಂದಿಗೆ ಅವರಿಗೆ ವಿವರಿಸಿದಾಗ ಆ ಪಾಠಗಳು ಹೆಚ್ಚು ಕಾಲ ಅವರ ಮನಸ್ಸಿನಲ್ಲಿ ಉಳಿಯುತ್ತದೆ ಎಂದು ಹೇಳಿದರು.

ಪರೀಕ್ಷೆಗೆ 90 ದಿನಗಳು ಬಾಕಿ ಉಳಿದಿದ್ದು, ಈ ದಿನಗಳನ್ನು ಸೂಕ್ತವಾಗಿ ಬಳಸಿಕೊಂಡಲ್ಲಿ ಉತ್ತಮ ಫಲಿತಾಂಶ ಸಾಧ್ಯ ಎಂದರು. ಜಿಪಂ ಸಿಇಒ ದಿಗ್ವಿಜಯ್ ಬೋಡ್ಕೆ ಮಾತನಾಡಿ, ಪರೀಕ್ಷೆಯನ್ನು ಈ ಬಾರಿ ಕಟ್ಟುನಿಟ್ಟಾಗಿ ನಡೆಸಲಾಗುತ್ತಿದೆ. ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ. ಟಿವಿ ಅಳವಡಿಸಲಾಗುವುದು ಎಂದರು. ಡಿಡಿಪಿಐ ಬಸವರಾಜೇಗೌಡ ಹಾಗೂ ಐದು ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಭಾಗವಹಿಸಿದ್ದರು.

IN THE COURT OF THE CIVIL JUDGE & JMFC AT KORATAGERE
C.MIS.No. 391/2024

Petitioners:- 1.Munegowda.C.J. S/o Late Gangappa, a/a 40 years 2. Jayarama S/o Late Gangappa a/a 28 years Both are R/o Chittepallipalya, Holavanahalli Hobli, Koratagere taluk.

V/S

Respondent:- The Tahasildar The Registrar of Birth and Death, Koratagere taluk.

PUBLIC NOTIFICATION

Whereas the petitioners have filed the above petition to obtain the death certificate of the 1st and 2nd petitioner's Grand- father by name Mallaiah S/o Late Chikkalingappa died on 18-12-2006 and Grand-mother by name Gangamma W/o Late Mallaiah died on 02-06-1986 at Koratagere taluk, Holavanhalli Hobli, Chittepallipalya. It is hereby notify that whoever has interest or 1st and 2nd objection to obtain the death certificate of the petitioner Grand-father and Grand-mother may appear in person or through your advocate on:-18/01/2025in the above case. Failing, which the matter will be herd written mined in your absence

By the order of Court
Shirastedar,
Civil Judge & JMFC AT KORATAGERE.
Advocate for petitioner,
M.C.Mallikarjunaiah, Koratagere.

IN THE COURT OF THE CIVIL JUDGE AND J.M.F.C. AT KORATAGERE
C.Mis.No. 358/2024

Petitioners: 1. T.H Sowbgya W/o Late Muddagangaiah Aged about 40 years, Thubuganahalli village Holavanahalli Koratagere tq hobli. 2. Kempamma W/o late Narashimhaiah Kodlahalli, Holavanahalli hibli Koratagere tq.

V/S

Respondent: The TAHSILDAR, Registrar of Birth and Death, Koratagere Taluk.

PUBLIC NOTIFICATION

petitioner have filed the above petition to obtain the death certificates 1st petitioner father in law and 2nd petitioner husband by name NARASHIMHAAIH S/O LATE CHINNAPPA DIED ON 01-01-2000 AND 1ST PETITIONER HUSBAND AND 2ND PETITIONER SON BY NAME MUDDAGANAGAIAH S/O LATE NARASHIMHAIAH DIED ON 10-05- 2005 IN 2ND PETITIONER HOUSE KODALAHALLI VILLAGE HOLAVANHALLI HOBLI KORATAGERE TQ, Is hereby notify that whoever has interest or objection to obtain the death certificates, there are any other legal heirs and there, they are hereby summoned to appear in the above court in persons or by pleader on 21/12/2024 at 11.00 AM. to answer the same, failing which the petition will be disposed off ex-parte. Given under my hand and the seal of the Court on this day 07 day of 11th 2024.

By the order of Court
Shirastedar,
Civil Judge & JMFC AT KORATAGERE.
Advocate for Petitioner
M. A Ravi. BA LLB. koratagere.

IN THE COURT OF THE CIVIL JUDGE AND J.M.F.C. AT KORATAGERE
C.MIS No.323/2024

PETITIONER :1) Gangamma W/o Late Chikkarangaiah D/o late Mylarappa Aged about 63 years Residing at Gowraganahalli village, Kasaba Hobli, Koratagere Taluk, Tumkur District.

V/S

RESPONDENT: The Tahsildar The Birth and Death Register, Koratagere,Koratagere Taluk Tumkur District.

PUBLIC NOTIFICATION

Where as the petitioner have filed the above petition to obtain the death certificates of the petitioner father by name Mylarappa S/o Late Lingappa ,died on. 01/06/1954 and petitioner mother by name Muddaramakka W/o Late Mylarappa, died on. 01/02/2014 at Buruganahalli village,Kasaba Hobli, Koratagere Taluk Tumkur District.It is hearby notify that whoever has interest or objection to obtain the death certificates of the father and mother may appear in person or through your advocate on 24/01/2025 in the above case, failing which the matter will be herd and place in exparte.

By the order of Court
Shirastedar,
Civil Judge & JMFC AT KORATAGERE.
Advocate for petitioner,
K.B.Anil , Thimmesh R.H. Koratagere.

IN THE COURT OF THE CIVIL JUDGE & JMFC AT KORATAGERE
C.MIS.No. 396 /2024

Petitioners:- 1.S.M.Arasegowda S/o Late Muttaiah, 70 years, 2.Chikkaveerappa S/o Late Muttaiah Aged about 70 years, Both are R/o Sunkadhalli, Kolala Hobli, Koratagere Taluk Petitioner. No.1 is Now R/o #1058, 8th A main, HSR layout, Sector 7, Bangalore South-560102.

V/S

Respondent:- 1.The Deputy-Tahsildar The Registrar of Birth & death, Kolala Koratagere Taluk. 2.Muttamma W/o Late Narasimhamurthy, Aged about 66 years, R/o.Sunkadhalli, Kolala Hobli, Koratagere Taluk.

PUBLIC NOTIFICATION

Whereas the petitioners have filed the above petition to obtain the death certificate of the 1st petitioner's father by name Muttaiah S/o Late Muttaiah died on 23-01-1979 at Koratagere Taluk, Kolala Hobli, Sunkadhahalli. It is hereby notify that whoever has interest or objection to obtain the death certificate of the 1st petitioner father may appear in person or through your advocate on:-01-02-2025 in the above case. Failing which the matter will be herd written mined in your absence.

By the order of Court
Shirastedar,
Civil Judge & JMFC AT KORATAGERE.
Advocate for petitioner,
H.V.Shivakumar, Koratagere.

IN THE COURT OF THE CIVIL JUDGE & JMFC AT KORATAGERE
C.MIS.No.390/2024

Petitioners:- H.Ramesh S/o Late Hanumanthaiah Aged about 62 years, R/o Sajjanara Street, 13th ward, Koratagere town and Taluk.

V/S

Respondent:- The Tahasildar The Registrar of Birth & death, Koratagere Taluk.

PUBLIC NOTIFICATION

Whereas the petitioner have filed the above petition to obtain the death certificate of the petitioner's Great-Grand-mother (ಮುತ್ತಜ್ಜಿ) by name Janamma W/o Late Narayanappa died on 19-04-2021 at Koratagere Taluk, Kasaba Hobli, Hanchihalli. It is hereby notify that whoever has interest or objection to obtain the death certificate of the petitioner Great-Grand-mother (ಮುತ್ತಜ್ಜಿ) may appear in person or through your advocate on:-18/01/2025 the above case. Failing which the matter will be herd written mined in your absence.

By the order of Court
Shirastedar,
Civil Judge & JMFC AT KORATAGERE.
Advocate for petitioner,
HV.Shivakumar, Koratagere.

IN THE COURT OF THE CIVIL JUDGE AND J.M.F.C. AT KORATAGERE
C.MIS No.395/2024

PETITIONERS : 1) Narayanappa S/o Late Rangappa Aged about 65 years, Present R/o Aregujjanahalli Village, Urdigere Hobli, tumkur taluk, Permanent address Gatlahalli Village, C.N Durga Hobli, Koratagere Taluk, Tumkur District.

V/s

RESPONDENT: The Tahsildar The Birth and Death Register Koratagere, Koratagere taluk, Tumkur dist.

PUBLIC NOTIFICATION

Where as the petitioner have filed the above petition to obtain the death certificates of the Father by name deceased Rangappa S/o Late Thippaiah died on. 20/09/2004 and mother by name deceased Sanjeevamma W/o Late Rangappa,died on.02/05/2000 at Gatlahalli Village,C.N.Durga Hobli, Koratagere Taluk, Tumkur District. It is hearby notify that whoever has interest or objection to obtain the death certificates of the Father and mother may appear in person or through your advocate dated on :01/02/2025 in the above case, failing which the matter will be herd and place in exparte.

By the order of Court
Shirastedar,
Civil Judge & JMFC AT KORATAGERE.
Advocate for petitioner,
K.B.Anil
Thimmesh R.H. Koratagere

ಶಾಂತಿಗೆ ದೈವ ಪ್ರೇರಣೆಯೂ ಬೇಕು

ಅವಧೂತ ಆದಿನಾರಾಯಣಸ್ವಾಮಿ 98ನೇ ಜಯಂತ್ಯುತ್ಸವ

ಸುಜ್ಞಾನಂಪಲ್ಲಿ ಗ್ರಾಮದ ಅವಧೂತ ಆದಿನಾರಾಯಣಸ್ವಾಮಿ ದೇಗುಲದಲ್ಲಿ ಜಯಂತ್ಯುತ್ಸವದಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ ಸಿ.ಮುನಿರಾಜು ಅನ್ನದಾನ ನೇರವೇರಿಸುತ್ತಿರುವುದು.

ಬಾಗೇಪಲ್ಲಿ: ಲೋಕ ಕಲ್ಯಾಣಾರ್ಥ ನಿಮಿತ್ತ ದೈವ ಕಾರ್ಯಕ್ಕೆ ಆಗಮಿಸಿರುವ ಸಮಸ್ತ ಭಕ್ತರ ಇಷ್ಟಾರ್ಥಗಳು ನೇರವೇರಲು ಭಗವಂತನ ಕೃಪೆ ಸಿಗಬೇಕೆಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಸಿ.ಮುನಿರಾಜು ಪವಾಡ ಮೂರ್ತಿ ಆದಿನಾರಾಯಣಸ್ವಾಮಿಯಲ್ಲಿ ಪ್ರಾರ್ಥಿಸಿಕೊಂಡರು.

ತಾಲೂಕಿನ ಸುಜ್ಞಾನಂಪಲ್ಲಿ ಗ್ರಾಮದ ಬೆಟ್ಟದ ದೇವಾಲಯದಲ್ಲಿ ಅವಧೂತ ಆದಿನಾರಾಯಣಸ್ವಾಮಿ 98ನೇ ಜಯಂತ್ಯುತ್ಸವ ಪ್ರಯುಕ್ತ ಅಯ್ಯಪ್ಪಸ್ವಾಮಿ ಭಜನೆ, ಪಂಚ ಕಜ್ಜಾಯ ಹಾಗೂ ಅನ್ನದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಬಾಗೇಪಲ್ಲಿ ಕ್ಷೇತ್ರ ವ್ಯಾಪ್ತಿಯಿಂದ ಭಕ್ತ ಸಾಗರವೇ ಹರಿದು ಬಂದು ಸ್ವಾಮಿ ದರ್ಶನ ಪಡೆದುಕೊಳ್ಳುತ್ತಿದ್ದಾರೆ. ಸ್ವಾಮಿಯಲ್ಲಿ ಪವಾಡ ಇದೆ ಎನ್ನುವುದಕ್ಕೆ ಹರಿದು ಬಂದಿರುವ ಭಕ್ತ ಸಾಗರವೇ ಸಾಕ್ಷಿ. ಭಕ್ತರಿಗೆ ಅನ್ನದಾನ ಹಾಗೂ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು. ಇಡೀ ದೇಗುಲ ಪ್ರಾಂಗಣ ತಳಿರು ತೋರಣಗಳಿಂದ ಸಿಂಗರಿಸಿ, ಅವಧೂತ ಆದಿನಾರಾಯಣ ಸ್ವಾಮಿ ಸಮಾಧಿಗೆ ವಿಶೇಷ ಪೂಜೆ ಸಲ್ಲಿಸಿ ಸ್ವಾಮಿಯ ಭಾವಚಿತ್ರ ಇಟ್ಟು ತೂಗು ಉಯ್ಯಾಲೆ ಉತ್ಸವ ನೇರವೇರಿಸಿದರು. ಕೊರೆಯುವ ಚಳಿ ಲೆಕ್ಕಿಸದೆ ಆಗಮಿಸಿದ್ದ ಲಕ್ಷಾಂತರ ಭಕ್ತರು ಅವಧೂತ ಆದಿನಾರಾಯಣಸ್ವಾಮಿ ದರ್ಶನ ಪಡೆದುಕೊಂಡು ಪುನೀತರಾದರು. ಬಿಜೆಪಿ ಮಂಡಾಧ್ಯಕ್ಷ ಆರ್.ಪ್ರತಾಪ್, ಗುಡಿಬಂಡೆ ಗಂಗಿರೆಡ್ಡಿ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ವೆಂಕಟೇಶ್, ಗ್ರಾ.ಪಂ.ಮಾಜಿ ಅಧ್ಯಕ್ಷ ಎಂ.ಬಿ.ಲಕ್ಷ್ಮೀನರಸಿಂಹಯ್ಯ, ಟ್ರಸ್ಟ್ ಅಧ್ಯಕ್ಷ ಆನಂದಪ್ಪ, ಉಪಾಧ್ಯಕ್ಷ ಬಾಸ್ಕರ್, ವೆಂಕಟರೆಡ್ಡಿ, ವೇಣುಗೋಪಾಲ, ಸತ್ಯನಾರಾಯಣ, ಈಶ್ವರಪ್ಪ ಇದ್ದರು.

ಕೇಂದ್ರ ಸಚಿವ ಎಚ್ಡಿಕೆ ಹುಟ್ಟುಹಬ್ಬದ ಪೂಜೆ

ಕೋಲಾರ: ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರ 65 ವರ್ಷದ ಜನ್ಮದಿನದ ಪ್ರಯುಕ್ತ ಜೆಡಿಎಸ್ ತಾಲೂಕು ಘಟಕದ ವತಿಯಿಂದ ನಗರದ ಸಾಯಿಬಾಬಾ ಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಿ ಕೇಕ್ ಕತ್ತರಿಸಿ ಸಂಭ್ರಮದಿಂದ ಆಚರಿಸಲಾಯಿತು.

ದಳಪತಿ ಸಿಎಂಆರ್ ಶ್ರೀನಾಥ್ ಮಾತನಾಡಿ, ಕುಮಾರಸ್ವಾಮಿ ಅವರು ನಾಡಿನ ಜನತೆಯ ಆಶಾಕಿರಣವಾಗಿದ್ದು ಹಲವಾರು ವರ್ಷಗಳಿಂದ ಆರೋಗ್ಯವನ್ನು ಲೆಕ್ಕಿಸದೇ ರಾಜ್ಯದ ಜನತೆಗಾಗಿ ದುಡಿಯುತ್ತಿದ್ದಾರೆ. ನಮ್ಮೆಲ್ಲರಿಗೂ ಶಕ್ತಿಯಾಗಿ ಕಾರ್ಯಕರ್ತರು ಅಭಿಮಾನಿಗಳಿಗೆ ಅಧಿಕಾರದಲ್ಲಿ ಇರಲಿ ಇಲ್ಲದೇ ಇದ್ದರೂ ಸದಾ ನಾಡಿನ ಜನ ಸೇವೆ ಮಾಡುತ್ತಿದ್ದಾರೆ. ಅವರಿಗೆ ರಾಜ್ಯವನ್ನು ಮುನ್ನಡೆಸುವ ಶಕ್ತಿ ದೇವರು ಕೊಡಲಿ ಎಂದು ಶುಭ ಹಾರೈಸಿದರು.

ಜೆಡಿಎಸ್ ಮುಖಂಡ ಲೋಕೇಶ್ ಮರಿಯಪ್ಪ, ಮುದುವಾಡಿ ಮಂಜುನಾಥ್,ಸುಧಾಕರ್, ಚಂಬೆ ರಾಜೇಶ್, ಯಲುವಗುಳಿ ನಾಗರಾಜ್, ಜಯ್ ಗೌಡ, ಬಲಿಜ ಸಂಘದ ಅಶೋಕ್, ಅನ್ವರ್, ಚಂಚಂ, ಸೌದ್ ಷರೀಫ್, ಹಾರೋಹಳ್ಳಿ ನಾಗರಾಜ್ ಇದ್ದರು.

ಜನರ ಒಕ್ಕಲೆಬ್ಬಿಸಿದರೆ ಉಗ್ರ ಹೋರಾಟ

ಗುಬ್ಬಿ: ನೂರಾರು ವರ್ಷದಿಂದ ಏಳೆಂಟು ತಲೆಮಾರು ಜನರು ಬದುಕು ಕಟ್ಟಿಕೊಂಡ ಅಂಕಳಕೊಪ್ಪ ಗ್ರಾಮಕ್ಕೆ ಏಕಾಏಕಿ ಬಂದು ಸರ್ವೇ ನಡೆಸಿ ಸುಮಾರು 70 ಮನೆಗಳನ್ನು ಖಾಲಿ ಮಾಡುವಂತೆ ತಾಕೀತು ಮಾಡಿರುವುದು ಖಂಡನೀಯ. ಅವೈಜ್ಞಾನಿಕ ಸರ್ವೇ ಸ್ಕೆಚ್ ಹಿಡಿದು ಮುಗ್ಧ ಜನರನ್ನು ಹೆದರಿಸಿ ಮನೆ ಒಡೆಯಲು ಬಂದರೆ ಉಗ್ರ ಹೋರಾಟ ಮಾಡುವುದಾಗಿ ಮಾಜಿ ಶಾಸಕ ಮಸಾಲಾ ಜಯರಾಮ್ ಎಚ್ಚರಿಕೆ ನೀಡಿದರು. ಸಿ.ಎಸ್.ಪುರ ಹೋಬಳಿ ಅಂಕಳಕೊಪ್ಪ ಗ್ರಾಮದಲ್ಲಿ ಸಂತ್ರಸ್ತರೊಂದಿಗೆ ಸಭೆ ನಡೆಸಿ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಈ ಗ್ರಾಮದಲ್ಲಿ ನೀರು, ರಸ್ತೆ, ದೀಪ, ಕರೆಂಟ್, ಜಲ ಜೀವನ್ ಮಿಷನ್ ನಳ ಸಂಪರ್ಕ ಹೀಗೆ ಅನೇಕ ಸವಲತ್ತು ಒದಗಿಸಿದ ಗ್ರಾಮ ಪಂಚಾಯಿತಿ ಕಂದಾಯ ಕೂಡಾ ವಸೂಲಿ ಮಾಡಿದೆ. ಇಖಾತೆ, ಇಸ್ವತ್ತು ಕೂಡಾ ಮಾಡಿಕೊಟ್ಟು ಬ್ಯಾಂಕ್ ಗಳು ಸಾಲವನ್ನು ಕೂಡಾ ನೀಡಿದೆ. ಇಷ್ಟೆಲ್ಲಾ ಅನುಕೂಲ ಪಡೆದ ಗ್ರಾಮಸ್ಥರನ್ನು ಹೇಗೆ ಒಕ್ಕಲೆಬ್ಬಿಸುತ್ತೀರಿ ಎಂದು ಪ್ರಶ್ನಿಸಿದರು. ಯಾವುದೇ ಸರಕಾರಿ ಕಟ್ಟಡಗಳು ನಮ್ಮೂರಿಗೆ ಮಂಜೂರಾಗಿಲ್ಲ. ಇಡೀ ಗ್ರಾಮವನ್ನು ಸ್ಕೆಚ್ ನಲ್ಲಿ ಸೇರಿಸಿದ ಸರ್ವೇ ಅವೈಜ್ಞಾನಿಕ. ಸರ್ವೇ ನಂಬರ್ 168 ರಲ್ಲಿ 6 ಎಕರೆ ಗುಂಡುತೋಪು ಜಾಗ ಈ ಗ್ರಾಮದ ಪಕ್ಕದಲ್ಲಿರುತ್ತದೆ. ಯಾವ ಉದ್ದೇಶಕ್ಕೆ ಇಡೀ ಗ್ರಾಮವನ್ನು ಖಾಲಿ ಮಾಡಿಸಲು ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ಮುಂದಾಗಿದ್ದಾರೆ ತಿಳಿದಿಲ್ಲ. ದುಡ್ಡಿಗಾಗಿ ಇದೆಲ್ಲಾ ಮಾಡುವುದಾದರೆ ಕುಳಿತು ಮಾತನಾಡೋಣ ಎಂದು ಕುಟುಕಿದರು.

ಕನಕಪುರದ ಅಯ್ಯಪ್ಪ ಸ್ವಾಮಿ ಭಕ್ತ ಆತ್ಮಹತ್ಯೆ

ರಾಮನಗರ: ಶಬರಿಮಲೆಗೆ ತೆರಳಿದ್ದ ಜಿಲ್ಲೆಯ ಅಯ್ಯಪ್ಪ ಭಕ್ತನಬ್ಬ ಅಯ್ಯಪ್ಪ ದೇವಾಲಯದ ಮೇಲಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಕನಕಪುರದ ಮದ್ದೂರಮ್ಮ ಬೀದಿ ನಿವಾಸಿ ಕುಮಾರ್ (40) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಶಬರಿಮಲೆ ದೇವಾಲಯದ ಮೇಲಿಂದ ಜಿಗಿದು ಆತ್ಮ ಹತ್ಯೆಗೆ ಶರಣಾಗಿದ್ದಾನೆ. ದೇವಾಲಯದ ಮೇಲಿಂದ ಜಿಗಿಯುವ ವೀಡಿಯೋ ಭಕ್ತರೊಬ್ಬರ ಮೊಬೈಲ್‌ನಲ್ಲಿ ಸೆರೆಯಾಗಿದೆ. ಎರಡು ದಿನಗಳ ಹಿಂದೆ ಕುಮಾರ್ ಸೇರಿದಂತೆ ಒಟ್ಟು 6 ಜನರು ಕನಕಪುರದಿಂದ ಶಬರಿ ಮಲೆಗೆ ತೆರಳಿದ್ದರು. ಅಯ್ಯಪ್ಪನ ದರ್ಶನ ಪಡೆದ ಬಳಿಕ ಕುಮಾರ್ ದೇವಾಲಯದ ಶೆಲ್ಟರ್ ಮೇಲಿಂದ ಜಿಗಿದಿದ್ದಾನೆ. ಕೂಡಲೇ ಚಿಕಿತ್ಸೆಗಾಗಿ ಕೊಟ್ಟಾಯಂ ಮೆಡಿಕಲ್ ಕಾಲೇಜಿಗೆ ರವಾನೆ ಮಾಡುವಾಗ ಮಾರ್ಗ ಮಧ್ಯೆ ಸಾವಿಗೀಡಾಗಿದ್ದಾನೆ. ಆತ್ಮ ಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸದ್ಯ ಶಬರಿ ಮಲೆಗೆ ಮೃತ ಕುಮಾರ್ ಕುಟುಂಬಸ್ಥರು ತೆರಳಿದ್ದಾರೆ. ಅಲ್ಲಿ ಮರಣೋತ್ತರ ಪರೀಕ್ಷೆ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರ ಮೃತದೇಹವನ್ನು ಕನಕಪುರಕ್ಕೆ ತರಲಿದ್ದಾರೆ. ಶಬರಿಮಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಡ್ಗೀರ ಹಾಸ್ಟೆಲ್ ಗೆ ಲೋಕಾಯುಕ್ತ ಭೇಟಿ

ತುಮಕೂರು: ತಾಲೂಕಿನ ಮೈದಾಳದ ಬಿಸಿಎಂ ಲೇಡೀಸ್ ಹಾಸ್ಟೆಲ್ ಗೆ ಮಂಗಳವಾರ ಲೋಕಾಯುಕ್ತ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸದರಿ ಹಾಸ್ಟೆಲ್‌ನಲ್ಲಿ ಸಮಸ್ಯೆಗಳು ರಾರಾಜಿಸುತ್ತಿದ್ದು, ವಾರ್ಡನ್, ಜಿಲ್ಲಾ ಅಧಿಕಾರಿ ಸೇರಿದಂತೆ ಯಾವುದೇ ಅಧಿಕಾರಿಗಳು ವಿದ್ಯಾರ್ಥಿನಿಯರ ಸಮಸ್ಯೆ ಬಗೆಹರಿಸುವಲ್ಲಿ ನಿರ್ಲಕ್ಷ ವಹಿಸಿರುವ ಬಗ್ಗೆ ವಿಶ್ವವಾಣಿ ಪತ್ರಿಕೆಯಲ್ಲಿ ವರದಿ ಪ್ರಕಟಗೊಂಡಿತ್ತು. ಪರಿಣಾಮವಾಗಿ ವಿದ್ಯಾರ್ಥಿನಿಯರು ಕಳೆದ ಗುರುವಾರ ಮಳೆಯಲ್ಲಿಯೇ ಪ್ರತಿಭಟನೆ ನಡೆಸಿ, ಸ್ಥಳಕ್ಕೆ ಜಿಲ್ಲಾಧಿಕಾರಿ ಆಗಮಿಸಿ ಸಮಸ್ಯೆ ಬಗೆಹರಿಸಲು ಆಗ್ರಹಿಸಿದ್ದರು.

ನಮ್ಮ ವರದಿ ಫಲಶೃತಿ



ಮಾಹಿತಿ ಪಡೆದ ಜಿಲ್ಲಾಧಿಕಾರಿ, ವಿದ್ಯಾರ್ಥಿನಿಯರು ಸಮಸ್ಯೆ ಬಗೆಹರಿಸುವಂತೆ ಬಿಸಿಎಂ ಅಧಿಕಾರಿಗೆ ಸೂಚಿಸಿದ್ದರು. ಪರಿಣಾಮಕಾರಿಯಾಗಿ 12 ಮಂದಿ ಹಾಸ್ಟೆಲ್ ಸಿಬ್ಬಂದಿ ವರ್ಗಾವಣೆ ಮಾಡಲಾಗಿತ್ತು. ಅಧಿಕಾರಿಗಳು ಸರ್ಕಾರದ ಸವಲತ್ತುಗಳನ್ನು ವಿದ್ಯಾರ್ಥಿನಿಯರಿಗೆ ತಲುಪಿಸದೆ ಅಕ್ರಮವೆಸಗಿದ್ದಾರೆ. ಈ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಆಯುಕ್ತರಿಗೆ, ಅಧಿಕಾರಿಗಳಿಗೆ ವಿದ್ಯಾರ್ಥಿನಿಯರು ಪತ್ರ ಬರೆದು ಒತ್ತಾಯಿಸಿದ್ದರು. ಇದೀಗ ಲೋಕಾಯುಕ್ತ ಅಧಿಕಾರಿಗಳು ಹಾಸ್ಟೆಲ್ ಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಿದರು.

ಸಮಾಚಾರ ಸಣ್ಣದಲ್ಲ

ಗ್ರಾಪಂ ಅಧ್ಯಕ್ಷರಾಗಿ ರಾಜಮ್ಮ ಆಯ್ಕೆ

ಚಾಮರಾಜನಗರ: ತಾಲೂಕಿನ ಉಮ್ಮತ್ತೂರು ಗ್ರಾಪಂ ಅಧ್ಯಕ್ಷರಾಗಿ ರಾಜಮ್ಮ ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷರಾಗಿದ್ದ ಯಮುನಾ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಡೆಯಿತು. ಸಾಮಾನ್ಯ ಮಹಿಳೆಗೆ ನಿಗದಿಯಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ರಾಜಮ್ಮ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಮಾದೇಶ್ ಆಯ್ಕೆಯನ್ನು ಘೋಷಣೆ ಮಾಡಿದರು. ನೂತನ ಅಧ್ಯಕ್ಷೆ ರಾಜಮ್ಮ ಮಾತನಾಡಿ, ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ಸದಸ್ಯರಿಗೆ, ಮುಖಂಡರು, ಹಿರಿಯರಿಗೆ ಅಭಾರಿಯಾಗಿದ್ದೇನೆ. ಗ್ರಾಮಗಳಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸಿ ಅಭಿವೃದ್ಧಿಗೆ ದುಡಿಯೋಣ ಎಂದರು. ಮಾಜಿ ಅಧ್ಯಕ್ಷ ಶ್ರೀಕಂಠ ಸ್ವಾಮಿ, ಗ್ರಾಪಂ ಉಪಾಧ್ಯಕ್ಷ ನಂಜುಂಡಶೆಟ್ಟಿ, ಮಾಜಿ ಅಧ್ಯಕ್ಷೆ ಯಮುನಾ, ಸದಸ್ಯರಾದ ಮಹದೇವಸ್ವಾಮಿ, ಶಿವಣ್ಣ, ನಾಗರತ್ನಮ್ಮ, ಸಿದ್ದರಾಜು, ಭವಾನಿ, ಸೌಮ್ಯ, ಪದ್ಮಮ್ಮ, ಮಾದಲಾಂಬಿಕೆ, ಚಂದ್ರು, ಚಂದ್ರ, ಪಿಡಿಒ ಮಹದೇವಪ್ರಭ, ಕಾರ್ಯದರ್ಶಿ ಶಿವಯ್ಯ ಇದ್ದರು.

ಕುರಿ ಸಾಕಣೆದಾರರ ನಿಗಮಕ್ಕೆ ನೇಮಕ

ಪಿರಿಯಾಪಟ್ಟಣ: ಕುರಿ ಮತ್ತು ಮೇಕೆ ಸಾಕಣೆದಾರರ ಮಹಾ ಮಂಡಳಿಗೆ ಸರಕಾರದ ನಾಮ ನಿರ್ದೇಶಿತ ನಿರ್ದೇಶಕರಾಗಿ ಪಿರಿಯಾಪಟ್ಟಣ ತಾಲೂಕಿನ ಸುಂಡವಾಳು ಗ್ರಾಮದ ಎಸ್.ಎಂ ಮಹಾದೇವ್‌ರನ್ನು ನೇಮಕ ಮಾಡಲಾಗಿದೆ. ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಸುಂಡವಾಳು ಮಹಾದೇವ್ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಕೆ.ವೆಂಕಟೇಶ್, ಕೆ.ಎನ್. ರಾಜಣ್ಣ, ಎಚ್.ಸಿ.ಮಹದೇವಪ್ಪ, ಬೈರತಿ ಸುರೇಶ್, ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಶಾಸಕ ಡಿ.ರವಿಶಂಕರ್, ಅವರನ್ನು ಸನ್ಮಾನಿಸಿ ಗೌರವ ಸಮರ್ಪಿಸಿದರು.ಈ ವೇಳೆ ಕುರುಬರ ಸಂಘದ ಅಧ್ಯಕ್ಷ ಹೆಚ್.ಡಿ.ಗಣೇಶ್, ಮಹಾಮಂಡಳಿ ನಿಗಮದ ಅಧ್ಯಕ್ಷ ಎಂ. ರಮೇಶ್, ಉಪಾಧ್ಯಕ್ಷ ಕಾಸಲಿಂಗ ಹುಡೇದ ಇದ್ದರು.

ಸೋಮನಹಳ್ಳಿ ಗ್ರಾಪಂಗೆ ಅಧ್ಯಕ್ಷೆ ಗಾಯತ್ರಿ ಸ್ವಾಮಿ

ಮದ್ದೂರು: ತಾಲೂಕಿನ ಸೋಮನಹಳ್ಳಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಗಾಯತ್ರಿ ಸ್ವಾಮಿ ಅವರು ಅವಿರೋಧವಾಗಿ ಆಯ್ಕೆಯಾದರು. ಇವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ತಾಪಂ ಇಒ ರಾಮಲಿಂಗಯ್ಯ ಅವಿರೋಧ ಆಯ್ಕೆ ಪ್ರಕಟಿಸಿದರು. ನೂತನ ಅಧ್ಯಕ್ಷೆ ಗಾಯಿತ್ರಿ ಸ್ವಾಮಿ ಅವರನ್ನು ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಚಲುವರಾಜು, ಗ್ರಾಪಂ ಸದಸ್ಯರು, ಸ್ಥಳೀಯ ಮುಖಂಡರು ಅಭಿನಂದಿಸಿದರು. ನೂತನ ಅಧ್ಯಕ್ಷೆ ಗಾಯಿತ್ರಿ ಸ್ವಾಮಿ ಮಾತನಾಡಿ, ತಮ್ಮ ಆಯ್ಕೆಗೆ ಸಹಕರಿಸಿದ ಸದಸ್ಯರಿಗೆ ಹಾಗೂ ಮುಖಂಡರಿಗೆ ಧನ್ಯವಾದ ಸಲ್ಲಿಸಿದರು. ಈ ವೇಳೆ ಉಪಾಧ್ಯಕ್ಷೆ ಕೆ.ಐಶ್ವರ್ಯ, ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಸಿ.ಟಿ.ಶಂಕರ್, ಸದಸ್ಯರಾದ ಸತ್ಯಭಾಮ, ಅಪೂರ್ವ, ಟಿ.ಸಿ.ಪ್ರೀತಮ್, ಎಸ್.ಪ್ರವೀಣ್, ಎಚ್.ಎಸ್.ಅನಿತ, ಸ್ವಾಮಿ, ಟಿ.ಆರ್.ನಂದೀಶ್, ಆರ್.ಎಸ್.ಕಿರಣ್, ಗೀತಾ, ಶಂಕರ್, ಮುಖಂಡರುಗಳಾದ ಗಿರೀಶ್, ಬಸವರಾಜು, ಜಯರಾಮು, ಬೊಮ್ಮಪ್ಪ, ಮನು, ರವಿಕುಮಾರ್, ಇತರರಿದ್ದರು.

ಬಡಾವಣೆಗೆ ಮಸಿ ಬಳಿಯುವ ಯತ್ನ

ಮಂಡ್ಯ: ಬಿ.ಟಿ.ಲಲಿತಾ ನಾಯಕ್ ಬಡಾವಣೆಯಲ್ಲಿ ಅಪಾರ ಪ್ರಮಾಣದ ಅಕ್ರಮ ಮದ್ಯ ಸಂಗ್ರಹಣೆ ಮಾಡಲಾಗಿದ್ದು, ಪೊಲೀಸ್ ವಶಕ್ಕೆ ಪಡೆದಿದ್ದಾರೆ ಎಂಬ ಸುಳ್ಳು ಸುದ್ದಿ ಹರಡಿದವರು ಯಾರು ಎಂಬುದನ್ನು ತಿಳಿಸಬೇಕು ಎಂದು ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕ್ರಮ ಮದ್ಯ ವಶ ಪಡಿಸಿಕೊಂಡ ವಿಷಯವಾಗಿ ಸುಳ್ಳು ಸುದ್ದಿ ಹರಡಲಾಗಿದೆ. ಚಿಕ್ಕಗೌಡನ ದೊಡ್ಡಿ ಗ್ರಾಮದಲ್ಲಿ ವಶಪಡಿಸಿಕೊಂಡ ಮದ್ಯದ ಸುದ್ದಿಯನ್ನು ಬಿ.ಟಿ.ಲಲಿತಾ ನಾಯಕ್ ಬಡಾವಣಯಲ್ಲಿ ವಶಪಡಿಸಿಕೊಂಡಿದ್ದಾರೆ ಎಂದು ಹೇಳುವ ಮೂಲಕ ಬಡಾವಣೆ ಹೆಸರಿಗೆ ಮಸಿ ಬಳೆದಿದ್ದಾರೆ ಎಂದು ಕಿಡಿಕಾರಿದರು. ಸುಳ್ಳು ಸುದ್ದಿ ಹರಡಿದವರು ಪತ್ರಕರ್ತರಲ್ಲ ಎಂಬುದು ಸ್ಪಷ್ಟತೆ ಪಡೆದ ಲಲಿತಾ ನಾಯಕ್ ಅವರು ವಿನಃ ಕಾರಣ ಸುಳ್ಳು ಸುದ್ದಿ ಹರಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಮೇಲುಕೋಟೆ ಬ್ಲಾಕ್ ಕಾಂಗ್ರೆಸ್‌ನ ಬೀದಿ ಬದಿ ವ್ಯಾಪಾರಿಗಳ ಅಧ್ಯಕ್ಷ ಪುಟ್ಟಸ್ವಾಮಿ, ಎಸ್‌ಪಿಐ ಜಿಲ್ಲಾಧ್ಯಕ್ಷ ಶೀನಾ ನಾಯಕ್, ವಕೀಲ ಎ.ರಾಮು ಇದ್ದರು.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆಪ್

{ ಕೆ.ಎಸ್.ಈಶ್ವರಪ್ಪ } ಮಾಜಿ ಡಿಸಿಎಂ

ವಕ್ಫ್ ಆಸ್ತಿಯನ್ನು ರಾಜಕಾರಣಿಗಳು ತಮ್ಮ ಸ್ವಂತಕ್ಕೆ ಬಳಸಿಕೊಂಡಿದ್ದಾರೆ. ಕೋಟ್ಯಂತರ ಬೆಲೆ ಬಾಳುವ ಭೂಮಿ ನುಂಗಿ ನೀರು ಕುಡಿದಿದ್ದಾರೆ. ನಾನು ವಿಧಾನಸಭೆಯಲ್ಲಿ ಈ ಬಗ್ಗೆ ಚರ್ಚೆಗೆ ಆಗ್ರಹಿಸಿದ್ದೆ. ಈಗ ಮುಖ್ಯಮಂತ್ರಿ ಕೂಡ ಸಿಬಿಐ ತನಿಖೆಯಾಗಲಿ ಎನ್ನುತ್ತಿದ್ದಾರೆ. ಸಿಬಿಐಗೆ ಸರಕಾರ ಕೂಡಲೇ ಒಪ್ಪಿಸಲಿ.

ಅರಮನೆ ಅಂಗಳದಲ್ಲಿ ನೂರಾರು ಬಗೆ ಹೂವುಗಳ ಲೋಕ

ಫಲಪುಷ್ಪ ಪ್ರದರ್ಶನ 21ರಿಂದ

ಮೈಸೂರು: ವರ್ಷಾಂತ್ಯಕ್ಕೆ ಮೈಸೂರು ನಗರಕ್ಕೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಫಲಪುಷ್ಪ ಕಾರ್ಯಕ್ರಮಕ್ಕೆ ದಿನಗಣನೆ ಆರಂಭವಾಗಿದೆ.

ದಸರಾ ಮಹೋತ್ಸವದ ನಂತರದಲ್ಲಿ ಅರಮನೆ ಅಂಗಳದಲ್ಲಿ ಫಲಪುಷ್ಪ ಪ್ರದರ್ಶನ, ವಿವಿಧ ಸಂಗೀತ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನಗೊಳ್ಳಲಿವೆ. ಅರಮನೆ ಮಂಡಳಿ ವತಿಯಿಂದ ಡಿ.21ರಿಂದ ಡಿ.31ರವರೆಗೆ 11 ದಿನಗಳ ಕಾಲ ಫಲಪುಷ್ಪ ಪ್ರದರ್ಶನ ಆಯೋಜಿಸಿದ್ದು, ಜೊತೆಯಲ್ಲಿ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ.

ಡಿ.21ರ ಸಂಜೆ 5ಕ್ಕೆ ಫಲಪುಷ್ಪ ಪ್ರದರ್ಶನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ.ಮಹದೇವಪ್ಪ ಚಾಲನೆ ನೀಡಲಿದ್ದಾರೆ. ಸಿಎಂ ಸಿದ್ದರಾಮಯ್ಯ ಹಾಗೂ ಕೇಂದ್ರ ಸಚಿವ ಹೆಚ್. ಡಿ.ಕುಮಾರಸ್ವಾಮಿ ಉಪಸ್ಥಿತರಿರುವರು. ಸಚಿವ ಕೆ. ವೆಂಕಟೇಶ್, ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಭಾಗವಹಿಸಲಿದ್ದಾರೆ.

ರಾತ್ರಿ 9ರವರೆಗೆ ಅವಕಾಶ: ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಬೆಳಿಗ್ಗೆ 10ರಿಂದ ರಾತ್ರಿ 9ಗಂಟೆವರೆಗೆ ಅವಕಾಶವಿದ್ದು, ವಯಸ್ಕರು ಹಾಗೂ ವಿದೇಶಿಯರಿಗೆ 30 ರೂ. ಹಾಗೂ 10ರಿಂದ 18 ವರ್ಷದೊಳಗಿನ ಮಕ್ಕಳಿಗೆ 20 ರೂ. ಪ್ರವೇಶ ದರವಿದ್ದು, 10 ವರ್ಷದೊಳಗಿನ ಮಕ್ಕಳಿಗೆ ಯಾವುದೇ ಶುಲ್ಕ ಇರುವುದಿಲ್ಲ.

25 ಸಾವಿರ ಹೂಕುಂಡ: ಸುಮಾರು 25,000 ವಿಭಿನ್ನ ರೀತಿಯ ಅಲಂಕಾರಿಕ ಹೂವಿನ ಕುಂಡಗಳು, (ಮೆರಿಗೋಲ್ಡ್, ಸಾಲ್ವಿಯ, ಡೇಲಿಯ, ಪಿಟೋನಿಯ, ಸೇವಂತಿಗೆ, ಕೋಲಿಯಸ್, ಸಿಲೋಷಿಯ, ನಸ್ಟರ್‌ಸಿಯಂ, ಆಂಟಿರೈನಂ, ವರ್ಬಿನ, ಜಿರೇನಿಯಂ, ಕಾಶಿಗೊಂಡೆ, ಆಸ್ಟರ್, ಗೈರಾಲ್ಡಿಯಾ, ಸೈಡರ್, ಬೋನ್ಸಾಯ್ ಗಿಡಗಳು ಸೇರಿದಂತೆ 35 ಜಾತಿಯ ಹೂವಿನ ಗಿಡಗಳು) ಅಂದಾಜು 6 ಲಕ್ಷ ವಿವಿಧ ಹೂವುಗಳಾದ ಗುಲಾಬಿಗಳು, ಕ್ರೈಸಾಂಥಿಮಮ್, ಪಿಂಗ್



ಮೈಸೂರಿನಲ್ಲಿ ಫಲಪುಷ್ಪ ಕಾರ್ಯಕ್ರಮಕ್ಕೆ ಸಿದ್ಧತೆ ಆರಂಭವಾಗಿದೆ.

ಪಾಂಗ್, ಕಾರ್ನೆಷನ್, ಆಸ್ಟಮೇರಿಯ, ಜರ್ಬೆರಾ, ಆಂಥೋರಿಯಮ್, ಆರ್ಕಿಡ್ಸ್, ಬ್ಲೂಡೈಸಿ, ಹಾಗೂ ಇತರೆ ಅಲಂಕಾರಿಕ ಹೂವುಗಳಿಂದ ಹಾಗೂ ಊಟಿ ಕಟ್ ಫ್ಲವರ್ ಗಳಿಂದ ಅಲಂಕರಿಸಲಾಗಿರುತ್ತದೆ.

ಮಾದರಿ ಚಿತ್ರ : ನವದೆಹಲಿಯ ಅಕ್ಷರಧಾಮ, ಮುಮ್ಮಡಿ ಕೃಷ್ಣರಾಜ ಒಡೆಯರ್, ನಂಜನಗೂಡಿನ ನಂಜುಂಡೇಶ್ವರ, ಹದ್ದು, ರಾಜ್ಯ ಪಂಚ ಗ್ಯಾರಂಟಿ ಯೋಜನೆಗಳು, ಮರಿಯಾನೆ, ಗಂಡುಭೇರುಂಡ, ಆಮೆ, ವನ್ಯಜೀವಿಗಳು, ಕಾರ್ಗಿಲ್ ಯುದ್ಧ ಸ್ಮಾರಕ, ನವಿಲು, ಸಂವಿಧಾನ ಪೀಠಿಕೆ ಮಾದರಿ ಚಿತ್ರಗಳನ್ನು ಹೂವಿನಿಂದ ಅಲಂಕರಿಸಲಾಗುತ್ತದೆ.

ನಿತ್ಯ ದೀಪಾಲಂಕಾರ: ಡಿ.22ರಿಂದ ನಿತ್ಯ 7ರಿಂದ 9ರವರೆಗೆ ಅರಮನೆ ವಿದ್ಯುತ್ ದೀಪಾಲಂಕಾರದಿಂದ ಜಗಮಗಿಸಲಿದೆ. ಡಿ.31ರಂದು ರಾತ್ರಿ 11ರಿಂದ 12ರವರೆಗೆ ಪೊಲೀಸ್ ಬ್ಯಾಂಡ್ ವಾದ್ಯ ಸಂಗೀತ ಇರಲಿದೆ. ಅಂದು ಮಧ್ಯರಾತ್ರಿ 12ರಿಂದ 12.15ರವರೆಗೆ ಹಸಿರು ಪಟಾಕಿಯ ಬಾಣ-ಬಿರುಸುಗಳಿಂದ 2025ನೇ ಹೊಸ ವರ್ಷ ಸ್ವಾಗತಿಸಲಾಗುತ್ತದೆ.

ಸಂಗೀತ ಸಂಜೆಗಳು: ಡಿ.21ರಂದು ಸಂಜೆ 5.30ಕ್ಕೆ ಸಿ.ಆರ್. ರಾಘವೇಂದ್ರ ರಾವ್ ಅವರಿಂದ ವಾದ್ಯಸಂಗೀತ ಸಂಜೆ 7ಕ್ಕೆ ಎ.ಆರ್.ಕಲಾ ಅವರಿಂದ ನಾಡಗೀತೆ ಸಂಸ್ಥಾನ ಗೀತೆ ಗಾಯನ 7.30ರಿಂದ ಮಧುಬಾಲಕೃಷ್ಣನ್ ಅವರಿಂದ ಸಂಗೀತ ಸಂಜೆ. ಡಿ.22ರಂದು ಸಂಜೆ 6ಕ್ಕೆ ರಘು ಗೀತ ಗಾಯನ 6.45ಕ್ಕೆ ನೃತ್ಯ ರೂಪಕ 7.30ರಿಂದ ವಿಜಯಪ್ರಕಾಶ್ ಅವರಿಂದ ಸಂಗೀತ ರಸಸಂಜೆ.

ಡಿ.23ರಂದು ಸಂಜೆ 6ಕ್ಕೆ ಶಾಸ್ತ್ರೀಯ ಸಂಗೀತ, 7ರಿಂದ ಆನೂರು ಅನಂತಕೃಷ್ಣಶರ್ಮರ ಲಯ- ಲಾವಣ್ಯ. ಡಿ.24ರಂದು ಸಂಜೆ 6ಕ್ಕೆ ಷಡಜ್ ಗೋಡ್ಕಿಂಡಿ- ಅಪೂರ್ವ ಕೃಷ್ಣ ಅವರಿಂದ ಕೊಳಲು- ವಯಲಿನ್ ಫ್ಯೂಷನ್ ಸಂಗೀತ, 7ಕ್ಕೆ ಹಿಂದೂಸ್ಥಾನಿ ಸಂಗೀತ- ಸಿದ್ದಾರ್ಥ ಬೆಲ್ಮಣ್ಣು ಗಂಜೀಫ ರಘುಪತಿ ಭಟ್ ಅವರಿಂದ ದಾಸವಾಣಿ ಚಿತ್ರಣ 8ಕ್ಕೆ ಚಂಪಕ ಅಕಾಡೆಮಿ ಅವರಿಂದ ನೃತ್ಯರೂಪಕ .

ಡಿ.25ರಂದು ಸಂಜೆ 5.45ರಿಂದ ನಾಹರ್ ಗುರುದತ್ತರಿಂದ ಶಾಸ್ತ್ರೀಯ ಸಂಗೀತ, ಕೇಶವಚಂದ್ರರ ದ್ವಂದ್ವ ವೇಣುವಾದನ.

ಸಂಜೆ 7ರಿಂದ 9ರವರೆಗೆ ಗಾಯಕರಾದ ದರ್ಶನ್ ನಾರಾಯಣ್, ಐಶ್ವರ್ಯ ರಂಗರಾಜನ್, ಸುನಿಲ್ ಗುಜಗೊಂಡ್, ಹಳೆಮನೆ ಜ್ಞಾನ ಗುರುರಾಜ್‌ರಿಂದ ಸಂಗೀತ ಯಾನ ಡಿ.31ರಂದು ರಾತ್ರಿ 11ಕ್ಕೆ ಪೊಲೀಸ್ ಬ್ಯಾಂಡ್ ವಾದ್ಯ ಸಂಗೀತ ನಡೆಯಲಿದೆ.

ವಿಶೇಷಚೇತನರಿಗೆ ಕುರುಣೆ ಬೇಡ, ಅವಕಾಶ ಕೊಡಿ

ಮೈಸೂರು: ವಿಶಿಷ್ಟ ಚೇತನರಲ್ಲೂ ಕವಿಗಳು, ಕಲಾವಿದರು, ಗಾಯಕರು, ಕ್ರೀಡಾಪಟುಗಳೂ ಇದ್ದಾರೆ. ಅವರನ್ನು ಸಮಾಜದ ಮುಖ್ಯ ವಾಹಿನಿಗೆ ಪರಿಚಯಿಸುವ ಕಾರ್ಯ ಸಂಘಸಂಸ್ಥೆಗಳು ಪ್ರಾಮಾಣಿಕವಾಗಿ ಮಾಡಬೇಕು ಎಂದು ಸಾಹಿತಿ ಟಿ. ಸತೀಶ್ ಜವರೇಗೌಡ ಸಲಹೆ ನೀಡಿದರು.

ನಗರದ ಅಕ್ಷರ ಭಾರತ್ ಮಿಷನ್ ವತಿಯಿಂದ ಕುವೆಂಪು ನಗರದ ಆಶಾದೀಪ ವಿಕಲಚೇತನರ ತರಬೇತಿ ಕೇಂದ್ರದಲ್ಲಿ ನಡೆದ 'ಕನ್ನಡ ರಾಜ್ಯೋತ್ಸವ ಹಾಗೂ ವಿಶ್ವ ವಿಕಲಚೇತನರ ದಿನಾಚರಣೆಯಲ್ಲಿ ಮಾತನಾಡಿದರು. ವಿಶಿಷ್ಟ ಚೇತನರಿಗೆ ಅನುಕಂಪ ತೋರುವ ಬದಲಿಗೆ, ಅವರ ಪ್ರತಿಭೆಯ ವಿಕಾಸಕ್ಕೆ ಅವಕಾಶ ಕಲ್ಪಿಸುವುದು ತುಂಬ ಮುಖ್ಯ ಎಂದರು.

ಪ್ರಸ್ತುತ ದಿನಗಳಲ್ಲಿ ಕನ್ನಡದ ಬಗ್ಗೆ ನಿರ್ಲಕ್ಷ್ಯ ಮನೋಭಾವ ಬೆಳೆಯುತ್ತಿದೆ. ಇಂಗ್ಲಿಷ್ ಕುರಿತು ವ್ಯಾಮೋಹ ವ್ಯಸನವಾಗುತ್ತಿದೆ. ಕನ್ನಡ ಕುರಿತು ಪ್ರೀತಿ ಮತ್ತು ಅಭಿಮಾನ ಬೆಳೆಸಬೇಕು. ಈ ದಿಕ್ಕಿನಲ್ಲಿ ಸಂಘಟಿತ ಪ್ರಯತ್ನದ ಅಗತ್ಯವಿದೆ ಎಂದರು.

ಸಾಹಿತಿ ರಾಮಣ್ಣ ತಟ್ಟೆ ಮಾತನಾಡಿ, ವಿಕಲ ಚೇತನರಲ್ಲಿ ಹಲವಾರು ಮಂದಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿ ಗಮನಸೆಳೆದಿದ್ದಾರೆ. ಆದ್ದರಿಂದ, ವಿಕಲ ಚೇತನರ ಸಾಧನೆಗೆ ನಾವು ನೆರವಾಗಬೇಕು ಎಂದರು.

ಅಂಧ ಸಾಹಿತಿ ಜಯಾನಂದ್ ಟೋಪುಗೋಳ ಮಾತನಾಡಿ 'ಅಂಗವಿಕಲರಿಗೆ ಅನುಕಂಪ ಬೇಡ. ಬದಲಿಗೆ ಅವಕಾಶ ಸೃಷ್ಟಿಸಿಕೊಡಿ ಎಂದರು.

ಆರೋಗ್ಯ ಇಲಾಖೆಯ ಅಂಧ ನೌಕರ ಹೆಚ್.ಕೆ. ನಾಗೇಶ್, ಆಶಾದೀಪ ತರಬೇತಿ ಕೇಂದ್ರದ ಸಂಸ್ಥಾಪಕ ಗುರುಸ್ವಾಮಿ, ರಂಗಸ್ವಾಮಿ, ಉಪನ್ಯಾಸಕ ಮುರುಳಿ, ಸಂಪನ್ಮೂಲ ಶಿಕ್ಷಕ ಎಸ್.ಎ. ಹರೀಶ್ ಉಪಸ್ಥಿತರಿದ್ದರು.

ಅಂಧ ಸಾಹಿತಿ ಜಯಾನಂದ್ ಟೋಪುಗೋಳರನ್ನು ಸನ್ಮಾನಿಸಲಾಯಿತು.

ನೊಂದವರ ಪರ ದನಿ ಎತ್ತಲಿ

ಮೈಸೂರು: ನೊಂದವರ ಪರ ದನಿಯಾಗುವ ಹೋರಾಟದ ರಾಜಕೀಯವನ್ನು ಎತ್ತಿ ಹಿಡಿಯಿರಿ ಎಂದು ಎಸ್.ಯು.ಸಿ.ಐ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ.ಉಮಾ ತಿಳಿಸಿದರು.

ನೃಪತುಂಗ ಶಾಲೆಯಲ್ಲಿ ಎಐಡಿಎಸ್‌ನ ರಾಜ್ಯ ಮಟ್ಟದ ಅಧ್ಯಯನ ಶಿಬಿರದ ಸಮಾರೋಪ ಅಧಿವೇಶನದಲ್ಲಿ ಅವರು ಮಾತನಾಡಿದರು.

ಜೀವನದ ಎಲ್ಲಾ ಅಂಶಗಳನ್ನು ನಿರ್ದೇಶಿಸುವುದೇ ರಾಜಕೀಯ. ಯಾರೂ ಸಹ ರಾಜಕೀಯದಿಂದ ತಟಸ್ಥವಾಗಿರಲು ಸಾಧ್ಯವಿಲ್ಲ. ರಾಜಕೀಯದಲ್ಲಿ ಎರಡು ರೀತಿಯ ಬಣಗಳಿದೆ. ಒಂದು ನ್ಯಾಯದ ಪರ ಇರುವ ರಾಜಕೀಯ. ಇನ್ನೊಂದು ಅನ್ಯಾಯದ ಪರವಾದ ರಾಜಕೀಯ. ಎಲ್ಲರೂ ವಿದ್ಯಾರ್ಥಿಗಳ ಪರಮೋಚ್ಚ ಜವಾಬ್ದಾರಿ ಎಂದರೆ ಓದು ಎನ್ನುತ್ತಾರೆ. ಆದರೆ ವಿದ್ಯಾರ್ಥಿಗಳ ಹೋರಾಟ ತಪ್ಪಿಸಲು ಹೀಗೆ ಹೇಳುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ನಿರುದ್ಯೋಗ ತಾಂಡವವಾಡುತ್ತಿದೆ. ಎಷ್ಟೋ ಜನ ಇರುವ ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ದೇಶದ ನ್ಯಾಯಾಂಗ ವ್ಯವಸ್ಥೆ ಕೂಡಾ ಬಡವರ ವಿರೋಧಿಯಾಗಿದೆ ಎನ್ನುವುದಕ್ಕೆ ಉದಾಹರಣೆ ಬಿಲ್ಕಿಸ್ ಬಾನು, ಬನ್ವಾರಿ, ಆರ್ ಜಿ ಕರ್ ಪ್ರಕರಣಗಳಲ್ಲಿ ಸಾಬೀತಾಗುತ್ತದೆ ಎಂದು ತಿಳಿಸಿದರು.

ಅಂಕ, ಪದಕ ಪಡೆಯುವುದು ವಿದ್ಯಾರ್ಥಿ ಜೀವನದ ಪರಮೋಚ್ಚ ಗುರಿಯಲ್ಲ. ಚಾರಿತ್ರ್ಯ ಗಳಿಸುವುದು ಶಿಕ್ಷಣದ ಗುರಿ. ಹೀಗಾಗಿ ವಿದ್ಯಾರ್ಥಿಗಳು ರಾಜಕೀಯದಲ್ಲಿ ಪಾಲ್ಗೊಳ್ಳುವುದು ಕೂಡ ವಿದ್ಯಾರ್ಥಿಗಳ ಜವಾಬ್ದಾರಿ ಎಂದರು. ಕಾರ್ಯದರ್ಶಿ ಅಜಯ್ ಕಾಮತ್ ಮಾತನಾಡಿದರು. ರಾಜ್ಯ ಉಪಾಧ್ಯಕ್ಷ ಅಭಯಾ ದಿವಾಕರ್, ಹಣಮಂತು, ಚಂದ್ರಕಲಾ, ಅಪೂ ರ್ವ, ರಾಜ್ಯ ಖಜಾಂಚಿ ಸುಭಾಷ್, ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ್ ಬಿಳೂರ್ ಇದ್ದರು.

ಸಂಜೆ ಕಾಲೇಜಿಗೆ ಕೃಷ್ಣ ಹೆಸರಿಡಲು ಸಲಹೆ

ವಿವಿ ನೌಕರರ ವೇದಿಕೆ ನುಡಿನಮನ | ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮನವಿ

ಮೈಸೂರು: ನಗರದ ಮಹಾರಾಜ ಕಾಲೇಜಿನಲ್ಲಿ ಓದಿದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯಬೇಕಾದರೆ ವಿಶ್ವವಿದ್ಯಾನಿಲಯ ಸಂಜೆ ಕಾಲೇಜಿಗೆ ಅವರ ಹೆಸರನ್ನು ನಾಮಕರಣ ಮಾಡಬೇಕು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಸಲಹೆ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ ವತಿಯಿಂದ ವಿವಿ ಸಂಜೆ ಕಾಲೇಜು ಎದುರು ಮಂಗಳವಾರ ಏರ್ಪಡಿಸಿದ್ದ ಎಸ್. ಎಂ. ಕೃಷ್ಣ ಗೆ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಿಂಡಿಕೇಟ್ ಸದಸ್ಯರು ಈ ಕುರಿತ ಪ್ರಸ್ತಾವನೆ ವಿವಿಯ ಮುಂದೆ ಇಡಬೇಕು ಎಂದು ಕೋರಿದರು. ನಾನು ಯುವ ಕಾಂಗ್ರೆಸ್ ಅಧ್ಯಕ್ಷ ಆದ್ದಾಗಿನಿಂದ ಕೃಷ್ಣ ಅವರೊಂದಿಗೆ ಒಡನಾಟ ಇತ್ತು. ಅವರು ಸಿಎಂ ಆಗಿದ್ದಾಗ ಯಶಸ್ವಿನಿ, ಬಿಸಿಯೂಟ, ಸ್ತ್ರೀಶಕ್ತಿ ಮತ್ತಿತರ ಯೋಜನೆಗಳನ್ನು ಜಾರಿ ಮಾಡಿದರು. ಅವರು ತಮ್ಮ ವ್ಯಕ್ತಿತ್ವ ಹಾಗೂ ಸಾಂಸ್ಕೃತಿಕ ಕಾಳಜಿ ಕಾರಣಗಳಿಗೆ ಇಷ್ಟವಾಗುತ್ತಾರೆ ಎಂದರು.

ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಸಿಂಡಿಕೇಟ್ ಸದಸ್ಯರಾದ ಡಾ.ಜೆ. ಶಿಲ್ಪಾ, ಡಾ.ಸಿ. ಬಸವರಾಜು ಜಟ್ಟಿಹುಂಡಿ, ಗೋಕುಲ್ ಗೋವರ್ಧನ್, ಡಾ.ಈ.ಸಿ. ನಿಂಗರಾಜ್ ಗೌಡ, ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಎಸ್. ಉಮೇಶ್, ಮಾನಸ ಗಂಗೋತ್ರಿಯ ಪ್ರಾಧ್ಯಾಪಕಿ ಡಾ.ಎಚ್.ಪಿ. ಜ್ಯೋತಿ, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಸ್. ಮಹದೇವಮೂರ್ತಿ, ಉಪ ಕುಲಸಚಿವ ಮಂಜುನಾಥ್, ಪುಣ್ಯಕೋಟಿ ಸೇವಾ ಸಮಿತಿಯ ಹನುಂತೇಶ್, ದೊರೆಸ್ವಾಮಿ, ಜಿಲ್ಲಾ ಕಸಾಪ ಕೋಶಾಧ್ಯಕ್ಷ ಜಿ. ಪ್ರಕಾಶ್, ಮೀನಾ, ವಿವಿ ನೌಕರರ ವೇದಿಕೆ ಅಧ್ಯಕ್ಷ ವಾಸುದೇವ, ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ವಿನೋದ್, ಡಾ.ನವೀನ್ ಕುಮಾರ್ ಇದ್ದರು.

ವಿವಿ ಸಂಜೆ ಕಾಲೇಜು ಎದುರು ಎಸ್.ಎಂ. ಕೃಷ್ಣಗೆ ನುಡಿನಮನ ಕಾರ್ಯಕ್ರಮ ನಡೆಯಿತು.

ಮೈಸೂರು ಭಾಗದ ಗಣ್ಯ ರಾಜಕಾರಣಿಗಳು

ಮಂಡ್ಯ ಜಿಲ್ಲೆಯ ರಾಜಕಾರಣದಲ್ಲಿ ಎಚ್.ಕೆ. ವೀರಣ್ಣಗೌಡ, ಕೆ.ವಿ. ಶಂಕರಗೌಡ, ಎಸ್.ಎಂ. ಕೃಷ್ಣ, ಎಚ್.ಡಿ. ಚೌಡಯ್ಯ, ಜಿ. ಮಾದೇಗೌಡ, ಮೈಸೂರು ರಾಜಕಾರಣದಲ್ಲಿ ಅರಸು. ಎಂ.ಎಸ್. ಗುರುಪಾದಸ್ವಾಮಿ, ಎಂ. ರಾಜಶೇಖರಮೂರ್ತಿ, ರಾಚಯ್ಯ, ಬಿ. ರಾಚಯ್ಯ, ಕೆ.ಎಸ್. ನಾಗರತ್ನಮ್ಮ, ಅಬ್ದುಲ್ ನಜೀರ್‌ಸಾಬ್, ದಾಸಪ್ಪ, ಯಶೋದರ ದಾಸಪ್ಪ, ತುಳಸಿದಾಸಪ್ಪ ಹೀಗೆ ಅನೇಕರು ಈ ಭಾಗದಿಂದ ಅತ್ಯುತ್ತಮ ರಾಜಕಾರಣಿಗಳು ಬಂದಿದ್ದಾರೆ. ಈಗ ಸಿದ್ದರಾಮಯ್ಯ ಇದ್ದಾರೆ. ಈಗಲೂ ರಾಜಕಾರಣದಲ್ಲಿ ಒಳ್ಳೆಯವರು ಇದ್ದಾರೆ. ಅವರನ್ನು ಗುರುತಿಸುವ ಕೆಲಸ ಆಗಬೇಕು ಎಂದು ವಿಜಯಕುಮಾರ್ ಹೇಳಿದರು.

ನಾಟಕ ಕಲೆಯಿಂದ ಸಮಾಜ ಪರಿವರ್ತನೆ ಸಾಧ್ಯ

ಚಾಮರಾಜನಗರ: ನಾಟಕದಿಂದ ಸಮಾಜ ಪರಿವರ್ತನೆ ಸಾಧ್ಯ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಮಂಜುನಾಥ ಪ್ರಸನ್ನ ಹೇಳಿದರು.

ನಗರದ ಡಾ. ರಾಜ್ ಕುಮಾರ್ ರಂಗಮಂದಿರದಲ್ಲಿ ಚೇತನ ಕಲಾವಾಹಿನಿ ಬೆಳ್ಳಿ ಮಹೋತ್ಸವ ನಿಮಿತ್ತ ಎಂ.ಪಿ.ರಾಜು ಅಭಿಮಾನಿ ಬಳಗದ ವತಿಯಿಂದ ನಡೆದ ಸುವರ್ಣ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಂ.ಪಿ.ರಾಜು ಅವರಿಗೆ ಅಭಿನಂದನೆ ಹಾಗೂ ದಕ್ಷಯಜ್ಞ ಪೌರಾಣಿಕ ನಾಟಕ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆಧುನಿಕ ಭರಾಟೆಯಿಂದ ನಮ್ಮ ಸಂಸ್ಕೃತಿ ಪರಂಪರೆ ನಶಿಸಿ ಹೋಗುತ್ತಿರುವ ರಂಗಭೂಮಿ ಕಲೆ ಉಳಿಸಿ ಬೆಳೆಸುವ ಜವಾಬ್ದಾರಿ ಕಲಾ ಪೇಕ್ಷಕರ ಮೇಲಿದೆ. ಜಿಲ್ಲೆಯಲ್ಲಿ ರಂಗಭೂಮಿ ಕಲೆ ಜೀವಂತ ಉಳಿಸುವ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಜಿಲ್ಲೆ ಜಾನಪದ ಕಲೆ ತವರೂರಾಗಿದ್ದು, ರಂಗ ಕಲೆಗೂ ಒತ್ತು ನೀಡಿದೆ. ಹೆಚ್ಚಿನ ಮಟ್ಟದಲ್ಲಿ ರಂಗಮಂದಿರದಲ್ಲಿ ನಾಟಕಗಳು ಪ್ರದರ್ಶನವಾಗುತ್ತಿವೆ ಎಂದರು.

ಎಂ.ಪಿ.ರಾಜು ಅವರ ನಾಟಕ ಸೇವೆ ಸರಕಾರ ಗುರುತಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿರುವುದು ಜಿಲ್ಲೆಯ ರಂಗಭೂಮಿಗೆ ದೊರೆತ ದೊಡ್ಡ ಗೌರವ. ಅವರ ನಾಟಕ ಸೇವೆಗೆ ಮತ್ತಷ್ಟು ಪ್ರಶಸ್ತಿ ಲಭಿಸಲಿ ಎಂದು ಆಶಿಸಿದರು. ವಿರಕ್ತಮಠದ ಶ್ರೀ ಚೆನ್ನಬಸವಸ್ವಾಮೀಜಿ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾಡಿನಾಡಿ, ಪ್ರಶಸ್ತಿ ಪುರಸ್ಕೃತರಾದ ಎಂ.ಪಿ.ರಾಜು ಅವರು ರಂಗಭೂಮಿಯಲ್ಲಿ ಮತ್ತಷ್ಟು ಸೇವೆ ಮಾಡಲಿ ಬಸವಾದಿಶರಣರ ಆಶೀರ್ವಾದ ಸದಾ ಅವರ ಮೇಲಿರಲಿ ಎಂದು ಆಶಿಸಿದರು.

ಇದೇ ಸಂದರ್ಭದಲ್ಲಿ ಸುವರ್ಣ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಂ.ಪಿ.ರಾಜು ಅವರನ್ನು ಅಭಿನಂದಿಸಲಾಯಿತು.

ಚೂಡಾಧ್ಯಕ್ಷ ಮಹಮ್ಮದ್ ಅಸ್ಕರ್ ಮುನ್ನಾ ಉದ್ಘಾಟಿಸಿ ಮಾತನಾಡಿದರು. ತಾಪಂ ಮಾಜಿ ಸದಸ್ಯ ಡಿ.ಪಿ.ಪ್ರಕಾಶ್, ರಂಗಭೂಮಿ ಕಲಾವಿದ ಸಿದ್ದಪ್ಪ, ಮುಖಂಡರಾದ ಆಲೂರುಮಲ್ಲು, ವೀರಶೈವ ಮಹಾಸಭಾ ರಾಜ್ಯ ಸಮಿತಿ ಸದಸ್ಯ ಮಹದೇವಸ್ವಾಮಿ, ಜಿಲ್ಲಾ ವೀರಶೈವ ಮಹಾಸಭಾದ ಸದಸ್ಯ ಸ್ಟೈಲ್ ಮಂಜು,ಬಸವನಪುರ ರಾಜಶೇಖರ್, ಶಿವಕುಮಾರಸ್ವಾಮಿ, ಎಂ.ಎನ್.ರಮೇಶ್, ಆರ್.ಮೂರ್ತಿ, ಎಂ.ಪಿ.ಮಾದಪ್ಪ, ಗುರುಕಾವುದವಾಡಿ, ಸುಬ್ಬೇಗೌಡ, ನಾಟಕ ವ್ಯವಸ್ಥಾಪಕ ಎಂ.ಎನ್.ಮಹದೇವ ಇದ್ದರು.

ಚಾಮರಾಜನಗರದಲ್ಲಿ ಸುವರ್ಣ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಂ.ಪಿ ರಾಜು ಅವರನ್ನು ಅಭಿನಂದಿಸಲಾಯಿತು.

ಜೋಡಿ ಚಿರತೆಗಳ ಸಂಚಾರ: ಗ್ರಾಮಸ್ಥರಲ್ಲಿ ಹೆಚ್ಚಿದ ಆತಂಕ



ನಾಗಮಂಗಲ: ಹಲವು ದಿನಗಳಿಂದ ತೋಟ, ಹೊಲಗದ್ದೆಗಳಲ್ಲಿ ಪ್ರತ್ಯಕ್ಷವಾಗುವ ಜೊತೆಗೆ ಹಲವರ ಮೇಲೆ ಮತ್ತು ಜಾನುವಾರು ಮೇಲೆ ದಾಳಿ ಮಾಡಿ ಆತಂಕ ಸೃಷ್ಟಿಸಿದ್ದ ಜೋಡಿ ಚಿರತೆಗಳು ಬೆಟ್ಟದಲ್ಲಿ ಸಂಚಾರ ಮಾಡಿವೆ. ಇದರಿಂದ ಭಯದ ವಾತಾವರಣ ಸೃಷ್ಟಿಯಾಗಿದೆ. ಅಲ್ಲದೆ ಚಿರತೆಗಳ ಸಂಚಾರದ ವಿಡಿಯೋ ವೈರಲ್ ಆಗಿದೆ.

